**+( ಡಿಸ್ಕ್ಲೈಮರ್/ ಸ್ಪಷ್ಟನೆ:**

*(ಇದೊಂದು ಕಾಲ್ಪನಿಕ ಕತೆ. ಒಂದು ಭವಿಷ್ಯದ ಲೋಕದ "ಫ್ಯಾಂಟಸಿ" ಸಾಹಸವಾಗಿದ್ದು, ಕೆಲವು ಹೊಸದಾಗಿ ಬೆಳಕಿಗೆ ಬರುತ್ತಿರುವ ವೈಜ್ಞಾನಿಕ ಅನ್ವೇಷಣೆಗಳನ್ನು ಮನದಲ್ಲಿಟ್ಟುಕೊಂಡು ಬರೆಯಲಾಗಿದೆ. ಯಾವುದೇ ಪ್ರಕಟಿತ ಸಾಹಿತ್ಯ/ ಅಂಕಣ/ಮಾಹಿತಿಯಿಂದ ನಕಲು ಮಾಡಲಾಗಿಲ್ಲ. ಹೋಲಿಕೆಯಿದ್ದಲ್ಲಿ ಅದು ಕೇವಲ ಕಾಕತಾಳೀಯ ಎಂದು ಭಾವಿಸಬೇಕು)*

## ಡಿಸ್ಟೋಪಿಯಾ: ಅನಂತಂ ಬ್ರಹ್ಮಾ!

## ಅಧ್ಯಾಯ 1: ಅಳಿದ ಜಗತ್ತು:

**ಇಸವಿ 2619, ಒಂದು ಲೆಕ್ಕ ಸಿಗದ ದಿನ...**

**ಭಾರತದಲ್ಲಿ ಎಲ್ಲೋ 1000 ಅಡಿ ಆಳದಲ್ಲಿ...**

### 1

ಮೊದಲು ಎಚ್ಚರವಾಗಿದ್ದು ಅವಳಿಗೆ...

ಅವಳಿಗನಿಸಿದ್ದು ಯಾವುದೋ ಗಾಜಿನ ಶವಪೆಟ್ಟಿಗೆಯಲ್ಲಿ ತಾನು ನಿಧಾನವಾಗಿ ಕಣ್ಣುಬಿಟ್ಟಂತೆ, ಎಲ್ಲಿ ಎಂದು ಎವೆಯಿಕ್ಕದೇ ನೋಡಿದರೂ ಅರಿವಾಗುತ್ತಿಲ್ಲ.

ಅವಳ ಕೈಗೆ ಹಚ್ಚಿದ್ದ ಟೇಪ್ ಮತ್ತು ರೋಬೋಟಿಕ್ ಸೂಜಿ ಸಿರಿಂಜ್ ತಾನಾಗಿಯೇ ಬಿಚ್ಚಿಕೊಂಡು ದೂರ ಸರಿಯಿತು. ಪೆಟ್ಟಿಗೆಗೆ ಆಕ್ಸಿಜೆನ್ ಸರಬರಾಜು ಮಾಡುತ್ತಿದ್ದುದು ನಿಂತು ಗಾಜಿನ ಮುಚ್ಚಳ ಸ್ವಯಂಚಾಲಿತವಾಗಿ ಹಿಂದೆ ಸರಿಯಿತು. ತಾನು ಯಾವುದೋ ಲ್ಯಾಬಿನಲ್ಲಿ ಬಿಳಿಸಮವಸ್ತ್ರ ಧರಿಸಿ ಆಪರೇಶನ್ನಿನಲ್ಲಿ ಮಲಗಿದಂತೆ

ಇದ್ದವಳು ದಡಕ್ಕನೆ ಎದ್ದು ಕುಳಿತಳು. ಆ ಚಲನೆಗೆ ಒಮ್ಮೆಲೇ ಹೊಟ್ಟೆ ತೊಳಸಿ ತಲೆ ಗಿರ್ರನೆ ಸುತ್ತಿದಂತಾಗಿ ಹಾಗೇ ಕಣ್ಮುಚ್ಚಿದಳು, “ಅಮ್ಮಾ...!”.



ಪಕ್ಕದಲ್ಲಿದ್ದ ಗಾಜಿನ ಡಬ್ಬಿಯಿಂದ ಗಂಡಿನ ಸ್ವರವೊಂದು ಹೊರಟಿತು,

“ಹೆಲೋ, ನಿನ್ನ ಹೆಸರು ಶೀತಲ್ ಎಂದೇ?”

ಗಾಬರಿಯಿಂದ ಅತ್ತ ತಿರುಗಿ ನೋಡಿದರೆ ಅಲ್ಲೊಬ್ಬ ಅದೇ ಸ್ಥಿತಿಯಲ್ಲಿ ಕಣ್ಣುಜ್ಜಿಕೊಂಡು ಆಕಳಿಸುತ್ತಿದ್ದ ಒಬ್ಬ 30 ವರ್ಷ ವಯಸ್ಸಿನ ಯುವಕ. ಅವನ ಗಾಜಿನ ಪೆಟ್ಟಿಗೆ ಮೇಲೆ **ಉಜ್ವಲ್ ಸಮರ್ಥ್** ಎಂಬ ಹೊಳೆಯುವ ಲೇಬಲ್ ಇದೆ..

“ಹಹ್ಹ್.. ಯಾರು? ಹೌದೌದು.. ನಾನು..” ಎಂದು ತೊದಲುತ್ತಾ ತನ್ನ ಪೆಟ್ಟಿಗೆಯ ಮೇಲಿದ್ದ ಅಂತದೇ ನಾಮಫಲಕದಲ್ಲಿ ‘**ಶೀತಲ್ ಪಾಟೀಲ್’** ಎಂದು ನಮೂದಿಸಿರುವುದನ್ನು ಕಂಡಳು.. “ನಮಗೇನಾಗಿದೆ?” ಎಂದಳು ಅರ್ಥವಾಗದೇ.

ಉಜ್ವಲ್ ಎಂಬ ಹೆಸರಿನ ಆ ಯುವಕ ಕೈಯಲ್ಲಿದ ಮಾನ್ಯುಯಲ್ ಒಂದನ್ನು ಎತ್ತಿ ತೋರಿದ. "ನಿನ್ನ ಕಾಲ ಬುಡದಲ್ಲಿಯೂ ಇಂತದ್ದು ಇದೆ..ಇದರ ಪ್ರಕಾರ ನಾವಿಬ್ಬರೂ ಬಹಳ ವರ್ಷಗಳ ಕೆಳಗೆ ಒಂದು ಸೈಂಟಿಫಿಕ್ ಪ್ರಯೋಗಕ್ಕೆ ಸಿಕ್ಕು ನಿದ್ರಾವಶವಾಗಿದ್ದು ಈಗ ತಾನೆ ಎಚ್ಚರಗೊಂಡಿದ್ದೇವೆ ಅನಿಸುತ್ತದೆ..."

ಶೀತಲ್ ಗಾಬರಿಯಿಂದ ತಾನೂ ತನ್ನ ಮಾನ್ಯುಯಲ್ ಪುಸ್ತಕ ಹುಡುಕಿ ತೆಗೆದಳು

"ಕ್ರಯೋಜೆನಿಕ್ ಸ್ಲೀಪ್ ಎಕ್ಸ್ಪರಿಮೆಂಟ್, ಇಂಡಿಯನ್ ಅಡ್ವಾನ್ಸ್ಡ್ ಬಯೋ ರೀಸರ್ಚ್, 2119..." ಇತ್ಯಾದಿ ಶೀರ್ಷಿಕೆಯಿದ್ದ ಇಂಗ್ಲೀಷಿನಲ್ಲಿದ್ದ ಹತ್ತು ಪುಟಗಳ ಕಿರುಹೊತ್ತಗೆ ಅದು. ಏನೋ ಅಸ್ಪಷ್ಟವಾಗಿ ಸ್ವಲ್ಪ ಸ್ವಲ್ಪ ನೆನಪು ಮರುಕಳಿಸುತ್ತಿದೆ...

ಉಜ್ವಲ್‌ಗೆ ಸಹಾ ತಲೆತಿರುಗಿದಂತಾಗಿ ಹಣೆಯನ್ನು ಕೈಯಲ್ಲಿ ಒತ್ತಿಕೊಂಡು ಮುಖ ಸಿಂಡರಿಸಿದ. "ನಮಗೇಕೆ ಹೀಗೆ ತಲೆ ಸುತ್ತಿ ವಾಂತಿ ಸಂಕಟವಾಗುತ್ತಿದೆ?"

ಶೀತಲ್ ನಕಾರದಿಂದ ತಲೆಯಾಡಿಸಿದಳು. ಅವಳಿಗೂ ಆ ವೇದನೆ ನಿಲ್ಲುತ್ತಿಲ್ಲ.

"ಮೊದಲು ಎದ್ದು ನೋಡೋಣ, ಕಮಾನ್!" ಎಂದು ತಾನು ಎದ್ದು ಒಂದು ಕೈ ಆಸರೆ ನೀಡಿ ಅವಳನ್ನೂ ಎಬ್ಬಿಸಿದ ಉಜ್ವಲ್.

ಇಬ್ಬರೂ ಆ ಹವಾನಿಯಂತ್ರಿತ ಲ್ಯಾಬಿನ ಮಂದ ಹಳದಿ ಬೆಳಕಿನಲ್ಲಿ ಸ್ವಲ್ಪ ಸಾವರಿಸಿಕೊಂಡು ಎದುರಿಗಿದ್ದ ಎರಡು ಕುರ್ಚಿಯಲ್ಲಿ ಕುಳಿತರು.

ಟಚ್ ಸೆನ್ಸರ್ ಇದ್ದುದರಿಂದಲೋ ಏನೋ, ಅವರು ಆ ಸೀಟುಗಳಲ್ಲಿ ಕುಳಿತೊಡನೆ ಎದುರಿಗೆ ಗಾಳಿಯಲ್ಲಿ ಒಂದು ಬೆಳಕಿನ ಚಿತ್ರಪರದೆ ತೆರೆದುಕೊಂಡಿತು.

"ಹಲೋ ಉಜ್ವಲ್ , ಶೀತಲ್..ಹೇಗಿದ್ದೀರಿ? ಈಗ ಎದ್ದಿರಾ?" ಎಂದಿತು ಆ ಪರದೆಯಲ್ಲಿ ಮೂಡಿಬಂದ ಒಬ್ಬ 70 ವರ್ಷ ವಯಸ್ಸಿನ ಬಿಳಿ ಗಡ್ಡಧಾರಿ, ಫ್ರೇಮ್ ಲೆಸ್ಸ್

ಕನ್ನಡಕಧಾರಿ ವ್ಯಕ್ತಿ ಅವರನ್ನು ಸ್ವಾಗತಿಸುತ್ತಾ ."ನಿಮ್ಮನ್ನು ಈ ಸ್ಥಿತಿಯಲ್ಲಿ ನೋಡಿ ನನಗೆ ಒಂದು ರೀತಿಯ ಖುಶಿ ಮತ್ತು ದುಃಖ ಎರಡೂ ಒಟ್ಟೊಟ್ಟಿಗೇ ಆಗುತ್ತಿದೆ..."

"ಸರ್, ನೀವ್ಯಾರು?" ಉಜ್ವಲ್ ಪ್ರಶ್ನಿಸಿದ ಕಾತರದಿಂದ

"ನಾವ್ಯಾರು?: ಪ್ರಶ್ನಿಸಿದಳು ಶೀತಲ್ ಆತುರದಿಂದ.

"ಪ್ಲೀಸ್ ವೈಟ್! ನಾನು ನಿಮ್ಮ ಪ್ರಶ್ನೆಗಳನ್ನು ಊಹಿಸಿ ಉತ್ತರಿಸುವೆ..." ಉಜ್ವಲ್ ಮತ್ತು ಶೀತಲ್ ಎದುರಿನ ಮಾನಿಟರಿನಲ್ಲಿ 3-ಡಿ ಚಿತ್ರದಲ್ಲಿದ್ದ ಆತ ಭಾರವಾದ ದನಿಯಲ್ಲಿ ನುಡಿದರು. ಅವರ ಧೋರಣೆಯೇ ಇಬ್ಬರ ಬೆನ್ನಿನಲ್ಲಿಯೂ ಚಳಿ ಮಿಂಚಿಸಿತ್ತು

ಆತ ಮುಂದುವರೆಸಿದರು,

"ನಾನು ನಿಮ್ಮನ್ನು ಈ ಮೊದಲು ಈ ಸುಧೀರ್ಘ ನಿದ್ರಾ ಪ್ರಯೋಗಕ್ಕೆ ಒಳಪಡಿಸಿದ 500 ವರ್ಷಗಳ ಹಿಂದೆ, 2119 ಇಸವಿಯಲ್ಲಿ ಇದ್ದ ಇಂಡಿಯನ್ ಅಡ್ವಾನ್ಸ್ಡ್ ಬಯೋ ರೀಸರ್ಚ್ ಸೆಂಟರಿನ ಬಾಸ್ ರಾಮನಾರಾಯಣ್ ಮಾತಾಡುತ್ತಿದ್ದೇನೆ... ನೀವಿಬ್ಬರೂ ಭಾರತದಲ್ಲಿ ಭೂಮಿಯ ಬಹಳ ಆಳವಾದ ನೆಲಮಾಳಿಗೆ ಅಂತಸ್ತಿನಲ್ಲಿ ಕ್ರಯೋಜೆನಿಕ್ ಸ್ಲೀಪಿನಿಂದ ಈ 500 ವರ್ಷಗಳ ನಂತರ ಈಗ ತಾನೇ ಎಚ್ಚರವಾಗಿದ್ದೀರಿ... ನಿಮ್ಮ ಹೃದಯ ಬಡಿತ ಮತ್ತು ಶ್ವಾಸದ ಏರಿಳಿತವನ್ನು, ಜೈವಿಕ ಚಟುವಟಿಕೆಯನ್ನು ಕ್ಷೀಣಗೊಳಿಸಿ, ಅತ್ಯಂತ ಮೈಕ್ರೋ ಲೆವೆಲ್ಲಿಗೆ ಇಳಿಸಿ ನಿಮ್ಮನ್ನು ವೈಜ್ಞಾನಿಕ ನಿದ್ರೆಯಲ್ಲಿ ಜೀವಂತವಾಗಿ ಇಡಲಾಗಿತ್ತು. ಯು ವರ್ ಇನ್ ಹೈಪರ್-ಸ್ಲೀಪ್ ಪಾಡ್ಸ್ ಚೇಂಬರ್ಸ್!. ನೀವು ಇದುವರೆಗೂ ಚಿಂತೆಯಿಲ್ಲದೇ ಕುಂಭಕರ್ಣರಂತೆ ನಿದ್ರಾವಶರಾಗಿದ್ದಿರಿ. ನೀವಿಬ್ಬರೂ ಭಾರತೀಯ ಬಯೋ ವಿಜ್ಞಾನಿಗಳು..ಈ ಪರೀಕ್ಷೆಗೆ ಒಡ್ಡಿಕೊಂಡು ನೀವಾಗಿಯೆ ಸ್ವಯಂಸೇವಕರಂತೆ ಸೇರಿದ್ದಿರಿ ಎಂಬ ಒಪ್ಪಂದ ಪತ್ರಗಳು ನಿಮ್ಮ ಸ್ಲೀಪಿಂಗ್ ಪಾಡ್‌ನಲ್ಲಿಯೇ ಇವೆ!"

ಈ ಆಘಾತಕಾರಿ ಸತ್ಯ ಕೇಳಿ ಉಜ್ವಲ್, ಶೀತಲ್ ಇಬ್ಬರ ಎದೆ ನಡುಗಿ ಹೋಯಿತು.. ಬಾಯಿ ಒಣಗಿ ಏನೋ ಹೇಳ ಹೋದರೆ ಸ್ವರವೇ ಹೊರಡುತ್ತಿಲ್ಲ..ಜತೆಗೆ ಸಿಡಿಯುವ ತಲೆನೋವು, ವಾಂತಿ ಸಂಕಟ ಬೇರೆ...

"ಉಜ್ವಲ್, ಶೀತಲ್!" ಅವರಿಗೆ ರಾಮನಾರಾಯಣ್ ಎಂದು ಕರೆದುಕೊಳ್ಳುವ ವ್ಯಕ್ತಿಯ ಕ್ಷೀಣ ಧ್ವನಿಯಲ್ಲಿ ಗಾಂಭೀರ್ಯದ ಜತೆ ನೋವಿನ ಎಳೆಯಿತ್ತು. ಏಕೆ?

"ದಯವಿಟ್ಟು ಬೇಗ ಅರ್ಥ ಮಾಡಿಕೊಳ್ಳಿ. ನಮಗಿರುವ ಒಂದೇ ಸಂಪರ್ಕ ಸಾಧನದ ಕೊನೆಯುಸಿರಿನಲ್ಲಿ ನಾನು ಈಗ ಸಂಭೋಧಿಸುತ್ತಿದ್ದೇನೆ. ನಾನು ಹೇಳುವುದನ್ನು ಮಧ್ಯೆ ಮಾತಿಲ್ಲದೇ ಕೇಳಿಸಿಕೊಳ್ಳಿ...ಇದನ್ನು ನೀವು ನನ್ನ ಮೊದಲ ಮತ್ತು ಕೊನೆಯ ರೆಕಾರ್ಡೆಡ್ ಸಂದೇಶ ಎಂದು ತಿಳಿಯಿರಿ...ಈ ಸಂದೇಶವನ್ನು ನೀವು ಕೇಳಿಸಿಕೊಳ್ಳುವ ಹೊತ್ತಿಗೆ ನಾನು ಇದನ್ನು ರೆಕಾರ್ಡ್ ಮಾಡಿಯೇ 450 ವರ್ಷ ಆಗಿಹೋಗಿರುತ್ತದೆ..."

ಮೊದಲನೆಯದಾಗಿ ನಿಮ್ಮ ಪ್ರಯೋಗ ಯಶಸ್ವಿಯಾಗುವ ಮುನ್ನವೇ ನಾವು ಹೊರಟುಹೋಗಿದ್ದೇವೆ.. ನಾವು ಅಲ್ಲಿಂದ ನಿಮ್ಮನ್ನು ರಕ್ಷಿಸಲು ಸಾಧ್ಯವೆ ಇಲ್ಲ ಯಾಕೆಂದರೆ ನಾವೀಗ ಭೂಗ್ರಹದಲ್ಲೇ ಇಲ್ಲ. ನಾವು ಚಂದ್ರನನ್ನೂ ದಾಟಿ ಬಾಹ್ಯಾಕಾಶದಲ್ಲಿ ಈಗ ಜೀವ ಜಗತ್ತಿನ ಉಳಿವಿಗೆ ಕೊನೆಯ ಆಸರೆಯಾದ "ಐ ಎಸ್ ಎಸ್ ಲೈಫ್ ಗಿವರ್" ಗಗನ ನೌಕೆಯಲ್ಲಿ ಮಿಶನ್ ಮಾಡ್ಯೂಲ್ ಬಾಹ್ಯಾಕಾಶ ನಿಲ್ದಾಣದಲ್ಲಿ ಇಳಿದಿದ್ದೇವೆ. ಇನ್ನೇನು, ನಾವು ಇಲ್ಲಿಂದ ಟೈಮ್ ವಾರ್ಪ್ (ಸಮಯ ಕುಗ್ಗಿಸುವ) ಪ್ರಯೋಗಾತ್ಮಕ ನೌಕೆಯಲ್ಲಿ ಶನಿಗ್ರಹದ ಉಪಗ್ರಹವಾದ ಟೈಟ್ಯಾನ್ ನತ್ತ ಸಾಗಿ ಹೋಗುತ್ತೇವೆ. ನಮ್ಮ ಪ್ರಕಾರ ಅಲ್ಲಿ ಭೂಮಿಯಂತ ಆರೋಗ್ಯಕರ ಹವಾಮಾನವಿದೆಯಂತೆ ನಮ್ಮ ಭವಿಷ್ಯಕ್ಕಾಗಿ ಅಲ್ಲಿಗೆ ಹೋಗಿ ನೆಲೆಸಲಿದ್ದೇವೆ, ಈ ನೌಕೆಯ ಸುಮಾರು ಐವತ್ತು ಮಾದರಿಗಳನ್ನು ತಯಾರಿಸಿ ನಾವು ಎಲ್ಲಾ ಮಿತ್ರದೇಶದವರು ಅವನ್ನು ಸಮವಾಗಿ ಹಂಚಿಕೊಂಡು ಭೂಮಿಯನ್ನು ತೊರೆದು ವಲಸೆ ಹೋಗಿಬಿಟ್ಟಿದ್ದೇವೆ...."

“ವಾಟ್, ನಾವು ಮಾತ್ರ ಇಲ್ಲಿ...ಯಾಕೆ?” ಎಂದು ಇಬ್ಬರೂ ಉದ್ಗರಿಸಿದರು.

ಆದರೆ ರೆಕಾರ್ಡೆಡ್ ಸಂದೇಶ ಓಡುತ್ತಲೆ ಇತ್ತು:-

“...ಅದಕ್ಕೆ ಕಾರಣವಿಷ್ಟೇ: ನಿಮ್ಮನ್ನು ಈ ಪ್ರಯೋಗಕ್ಕೊಳಪಡಿಸಿದ ಸುಮಾರು 20 ವರ್ಷಗಳ ನಂತರ ಭೂಮಿಯಲ್ಲಿ ಅತಿ ದೊಡ್ಡ ಪರಮಾಣು ಯುದ್ಧವೇ ನಡೆದು ಹೋಯಿತು. ಇದರಲ್ಲಿ ಕೊರಿಯಾ ಜತೆ ಚೀನಾ ಒಂದೆಡೆ, ಅಮೆರಿಕಾ ರಷ್ಯಾ ಮತ್ತು ಯುರೋಪ್ ಇನ್ನೊಂದು ಕಡೆ, ಅಲಿಪ್ತ ದೇಶಗಳು ಮೂರನೆಯ ತುದಿ... ಭೂಮಿಯಲ್ಲಿ ಎಲ್ಲೆಲ್ಲಿಯೂ ಅಣುಬಾಂಬು, ಮಿಸೈಲುಗಳ ರುದ್ರನರ್ತನ ನಡೆಯಿತು, ಆ ಮಾರಣಹೋಮ ಸತತ ಒಂದು ವರ್ಷ ನಡೆಯಿತು. ಆ ಪ್ರಾಣಾಪಾಯಕಾರಿ ವ್ಯಾಪಕ ಹೊಡೆತಕ್ಕೆ ಭೂಮಿಗೆ ಭೂಮಿಯೇ  ಸಸ್ಯ, ಜಲರಾಶಿ ವಾತಾವರಣ ಎಲ್ಲಾ ಕಳೆದುಕೊಂಡು ಸುಟ್ಟು ಕರಕಲಾಯಿತು... ಈ ಮಹಾಕಾಳಗ ನಡೆಯುವ ಸಮಯದಲ್ಲಿ ನಾನು ಸಹಾ ಕೆಲಸದಿಂದ ನಿವೃತ್ತನಾಗಿದ್ದೆ, ಮತ್ತೆ ವಾಪಸ್ ಕರೆಸಿಕೊಂಡರು. ಅಂದರೆ ಭೂಮಿಗೆ ಅತ್ಯಂತ ಕ್ಲಿಷ್ಟವಾದ ಅಂತ್ಯ ಬಂದೊದಿದಾಗ ನಾವು ಭಾರತೀಯರು ನಮ್ಮ ಈ ಲ್ಯಾಬಿನ ಮೊದಲ ಅಂತಸ್ತಿನ ನೆಲಮಾಳಿಗೆಯಲ್ಲಿ  ಅಡಗಿ ಪ್ರೋಟೀನ್ ಮತ್ತು ಕೆಮಿಕಲ್ ಆಧರಿತ ಆಹಾರವನ್ನು ಮಾತ್ರೆ ಮತ್ತು ಇಂಜೆಕ್ಷನ್ ರೂಪದಲ್ಲಿ ಸೇವಿಸಿತ್ತಾ ಬದುಕುಳಿಯುವ ಹೋರಾಟ ಮಾಡುತ್ತಿದ್ದೆವು. ಆ ಭಯಾನಕ ಸಮಯವನ್ನು ನಾನು ವಿವರಿಸಿಯೂ ಹೇಳಲಾರೆ, ನಿಮಗರ್ಥವೂ ಆಗದು..ಆ ನಡುವಿನಲ್ಲಿ ನಮ್ಮಲ್ಲಿ ಸಹಾ ಸಾವಿರಾರು ನಾಗರೀಕರು ಭೂಗರ್ಭದಲ್ಲಿ ಅಸು ನೀಗಿ ಅಲ್ಲೇ ಸಮಾಧಿಯಾದರು...ಆದರೆ ಕೊನೆಯಲ್ಲಿ  ನಾವು ಕೆಲವು ನೂರು ಗಟ್ಟಿಗರು ಮಾತ್ರ ಉಳಿದುಕೊಂಡೆವು...”

“...ಈಗ ಭೂಮಿಯಲ್ಲಿ ನೀವು ಹೊರಬಂದು ನೋಡಿದಾಗ ಯಾರೂ ಏನೂ ಇರಲಾರರು...ಖಾಲಿ, ನಶಿಸಿಹೋದ ಸುಟ್ಟ ಭೂಮಿ ಮತ್ತು ಪಳೆಯುಳಿಕೆಗಳು ಕಣ್ಣಿಗೆ ರಾಚಿದಂತೆ ನಿಮಗೆ ಎದುರಾಗಬಹುದು ಎಂದು ಮನಸ್ಸು ಗಟ್ಟಿ ಮಾಡಿಕೊಳ್ಳಿ. ಇದರ

ಮೇಲೆ ನಾನು ಏನೂ ಹೇಳಲಾರೆ...ಆದರೆ ಪ್ರಮಾದವಶಾತ್ ನಮಗೆ ನಿಮ್ಮನ್ನೂ ಜತೆಗೆ ಕೊಂಡೊಯ್ಯಲು ಆಗಲೇ ಇಲ್ಲ. ನಮ್ಮ ಮೊದಲನೇ ಅಂತಸ್ತಿನಿಂದ ನಿಮ್ಮ ಮೂರನೆ ಮಾಳಿಗೆಗೆ ಬರುವ ಸಂಚಾರ ಗುಹೆ ವ್ಯವಸ್ಥೆ ಭೂಕಂಪವಾಗಿ ಸಂಪೂರ್ಣ ಕುಸಿದು ನಶಿಸಿಹೋಗಿತ್ತು. ಅಲ್ಲದೇ ನಿಮ್ಮ ತರಹ ಜಡದೇಹಿಗಳಾಗಿದ್ದವರನ್ನು ಮಧ್ಯೆ ಆಗಲೇ ನಿಮ್ಮನ್ನು ಎಬ್ಬಿಸಿದ್ದರೆ ನಾನಾರೀತಿಯ ದೈಹಿಕ ವೈಪರೀತ್ಯಗಳು ನಿಮ್ಮನ್ನು ಕಾಡುವುದು ಮತ್ತು ಅದರಿಂದ ಉಂಟಾಗುವ ಅನಾರೋಗ್ಯದಿಂದ ನಿಮ್ಮ ಸಾವು ನಿಶ್ಚಿತವಾಗಿರುತಿತ್ತು. ವಿಧಿಯಿಲ್ಲದೇ ನಾವು ನಿಮ್ಮನ್ನು ಒಂಟಿಯಾಗಿ ಬಿಟ್ಟು ಹೊರಟುಹೋಗಿದ್ದೇವೆ..."

"...ನೀವು ಹೊರಬರಲು ಒಂದೇ ಒಂದು ಭೂಗರ್ಭ ಎಲಿವೇಟರ್ ಮಾರ್ಗ ಇರುತ್ತದೆ. ದಿಕ್ಸೂಚಿ ದೀಪಗಳನ್ನು ಗಮನಿಸುತ್ತಾ ಅತ್ತ ಹೊರಡಿ...ನೀವು. ನಿಮ್ಮ ಮಿಕ್ಕ 1 ಸೆಟ್ ಬಟ್ಟೆ ಮಾತ್ರ ಇದೆ. ಒಂದು ಟೂತ್ ಬ್ರಶ್ ಇತ್ಯಾದಿ ಒಂದು ಬ್ಯಾಕ್ ಪ್ಯಾಕಿನಲ್ಲಿದೆ. ಉಪಯೋಗಿಸಿ ನೋಡಿ.....ನಿಮಗಾಗಿ ಫ್ರೋಜನ್ ನೀರು ಮತ್ತು ಕೆಲವು ಪ್ರೋಟೀನ್ ಮತ್ತು ವಿಟಮಿನ್ ಇಂಜೆಕ್ಷನ್ಸ್ ಇಟ್ಟಿರುತ್ತೇವೆ... ಅದನ್ನು ಉಪಯೋಗಿಸಿಕೊಳ್ಳಿ, ಸ್ವಲ್ಪ ಸ್ವಲ್ಪವೇ ರೇಷನ್ ತರಹ..."

"...ಇನ್ನು ನೀವು ಎಲ್ಲಿ  ನಿಭಾಯಿಸುತ್ತೀರೋ, ಹೇಗೆ ಎಷ್ಟು ಕಾಲ ಬದುಕುತ್ತೀರೋ ನನಗೆ ಗೊತ್ತಿಲ್ಲ.

"...ಆದರೆ ನಮ್ಮ ಅಂದಾಜಿನ ಪ್ರಕಾರ ನೀವು ಹೊರಬರುವ ವೇಳೆಗೆ ಪರಮಾಣು ಯುದ್ಧ ಮುಗಿದು 450 ವರ್ಷವಾಗಿದ್ದರಿಂದ ಭೂಪ್ರದೇಶದಲ್ಲಿ ಅಣು ವಿಕಿರಣದ ರೇಡಿಯೇಶನ್ ಪ್ರಭಾವ ತಗ್ಗಿರಬಹುದು, ನಂತರದ ಸ್ವಲ್ಪ ಶತಮಾನಗಳ ಕಾಲ ಮಳೆ, ಮಂಜು, ತೇವ ಸಹಾ ಭೂಮಿಗೆ ವಾಪಸ್ಸಾಗಿರಬಹುದು. ಭೂಮಿಗೆ ಪ್ರವೇಶಿಸುವ ಮುನ್ನ  ಪ್ರವೇಶದ್ವಾರದಲ್ಲಿ ಆಂಟಿ ರೇಡಿಯೇಶನ್ ಸೂಟ್ ಇಟ್ಟಿರುತ್ತೇವೆ, ಅದನ್ನು ಹಾಕಿಕೊಂಡು ಹೊರಹೋಗಿ ನೋಡಿ... ಹೆಚ್ಚು ರೇಡಿಯೇಶನ್  ಏನೂ ಇಲ್ಲದಿದ್ದರೆ

ಅದನ್ನು ತೆಗೆಯಬಹುದು... ಅದನ್ನು ರೇಡಿಯೇಶನ್ ಮೀಟರಿನಲ್ಲಿ  ನೀವೇ ಕಂಡುಕೊಳ್ಳಬೇಕು... ಮುಕ್ಕಾಲುವಾಸಿ ನಿಮಗೆ ಪ್ರತಿಕೂಲ ವಾತಾವರಣವೇ ಎದುರಾಗುವುದು

"...ಇನ್ಯಾವ ದೇಶದಲ್ಲಿ ಇನ್ನೆಷ್ಟು ಜನ ಹೀಗೆ ಉಳಿದಿದ್ದು ಬದುಕಿದ್ದಾರೋ, ಹೇಗಿದ್ದಾರೋ ಅದನ್ನು ನೀವೇ ಪತ್ತೆಹಚ್ಚಿ ಸಂಪರ್ಕಿಸಬೇಕು... ನಿಮಗಾಗಿ ಲೇಸರ್ ಗನ್, ಮತ್ತಿತರ ಎಲೆಕ್ಟ್ರಾನಿಕ್ ಅಸ್ತ್ರಗಳನ್ನು ಇಟ್ಟಿದ್ದೇವೆ...ನಿಮಗೆ ಈ ಪ್ರಯೋಗಕ್ಕೂ ಮುನ್ನ ಇದೆಲ್ಲದರ ಟ್ರೈನಿಂಗ್ ನೀಡಿರುತ್ತೇವೆ...ನಿಮಗೆ ನೆನಪಿದ್ದರೆ ಒಳ್ಳೆಯದು..."

"...ಸದ್ಯಕ್ಕೆ ನಾವು ಹೊರಡುವ ಕಾಲದಲ್ಲಿ ಈಗ ನಮಗೆ ಸೂರ್ಯನೇ ಕಾಣದಷ್ಟು ಭೂಮಿಯೆಲ್ಲಾ ಹಗಲಿನಲ್ಲಿ ಮಬ್ಬುಗತ್ತಲೆ ಇದೆ. ಚಂದ್ರ ತಾರೆಯರ ದರ್ಶನವಿಲ್ಲದೇ ಎಷ್ಟೋ ವರ್ಷವಾಯಿತು. ನಮ್ಮ ಸ್ಪೇಸ್ ಸೈನ್ಸ್ ಬಹಳ ಮುಂದುವರೆದಿದ್ದ ಕಾರಣ ಕೆಲವು ದೊಡ್ಡ ಉಪಗ್ರಹಗಳು ಬಾಹ್ಯಾಕಾಶದಲ್ಲಿ ನಮ್ಮ ಮಾರ್ಗದರ್ಶಿಯಾಗಿ ಕೆಲಸ ಮಾಡಿದ್ದರಿಂದ ನಾವು ಈ ನೌಕೆಗಳನ್ನು ಕಟ್ಟಿಕೊಂಡು ಹರಸಾಹಸ ಮಾಡಿ ಹೊರಬರಬಹುದಾಯಿತು".

"...ನಿಮಗೆ ಈಗ ಹೊರಗಿನ ಪ್ರಪಂಚದಲ್ಲಿ ಯಾವುದೇ ವ್ಯವಸ್ಥಿತ ಸಮಾಜ ಅಥವಾ ಸರಕಾರವಿರಲಾರದು.. ಯಾವ ರೀತಿಯ ಜೀವಿಗಳು ಯಾವ ಮನಸ್ಥಿತಿಯಲ್ಲಿರುವವರಾದರೂ ಸಿಗಬಹುದು...ಅದೂ ಅವರು ಬದುಕಿ ಉಳಿದಿದ್ದರೆ ಮಾತ್ರ!..ಸರಿ...ಇನ್ನು ನಾನು ಮುಗಿಸುವೆ...ನಿಮ್ಮನ್ನು ಈ ರೀತಿಯ ಬರಡಾದ ವಿನಾಶಾನಂತರದ ಡಿಸ್ಟೋಪಿಯ ಎಂದು ಕರೆಯಲ್ಪಡುವ ಸ್ಥಿತಿಯ ಭೂಮಿಯಲ್ಲಿ ಬಿಟ್ಟು ಹೋಗಿದ್ದಕ್ಕೆ ನಮಗೆ ಅಪಾರ ಖೇದವಿದೆ, ಕ್ಷಮಿಸಿ. ನಾವಿನ್ನೇನನ್ನೂ ಮಾಡಲು ಸಾಧ್ಯವಿರಲಿಲ್ಲ ಎಂದು ನಂಬಿ. ನಿಮಗೆ ಶುಭವಾಗಲಿ. ಹ್ಯಾವ್ ಎ ಲಾಂಗ್ ಲೈಫ್, ಬೈ!"

ಆ ವಿದ್ಯುನ್ಮಾನ ಬೆಳಕಿನ ಚಿತ್ರ ಪ್ರಸಾರ ಒಂದು ಚಿಕ್ಕ ಬೀಪ್ ನೊಂದಿಗೆ ಅಂತ್ಯವಾಯಿತು.

ಉಜ್ವಲ್ ಮತ್ತು ಶೀತಲ್ ಪರಸ್ಪರ ಮುಖ ನೋಡಿಕೊಂಡರು.

ಶೀತಲ್ ಗಾಬರಿಯಿಂದ ನುಡಿದಳು, “ಡಿಸ್ಟೋಪಿಯದಂತಾ ಪ್ರಪಂಚ?... ಆದರೂ ಅವರು ನಮ್ಮನ್ನು ಇಲ್ಲಿ ಧೀರ್ಘಕಾಲ ಬಾಳಿ ಎಂದರಲ್ಲ?.. ಹೌ ಫನ್ನಿ...!” ಆದರೆ ಅವಳು ನಗಲಿಲ್ಲ, ದನಿ ದುಗುಡದಿಂದ ಕೂಡಿತ್ತು.

“ಹೌದು, ಶೀತಲ್...”  ತನ್ನ ಹಿಂಗೈಗೆ ಸೂಜಿ ಚುಚ್ಚಿದ್ದ ಗಾಯವನ್ನೊಮ್ಮೆ ಉಜ್ಜಿಕೊಳ್ಳುತ್ತ ಉತ್ತರಿಸಿದ ಉಜ್ವಲ್. “ಯಾವ ಮನುಷ್ಯನೂ ಮಾಡದಷ್ಟು ನಿದ್ದೆಯಾಯಿತು ನಮಗೆ...ಇನ್ನು ಧೀರ್ಘ ಕಾಲ ಬದುಕುವುದು ಮಾತ್ರ ಉಳಿದಿದೆ”

ಇಬ್ಬರೂ ಲ್ಯಾಬಿನ ಬಾಗಿಲು ತಳ್ಳಿಕೊಂಡು ಹೊರಬಂದರೆ ದೀಪ ಮಿನುಗುತ್ತಿದ್ದ ಲಿಫ್ಟ್ ಆ ಕಾರಿಡಾರಿನ ಮೂಲೆಯಲ್ಲಿತ್ತು.

“ಹೇಗೆ ಇಲ್ಲಿ ಇನ್ನೂ ವಿದ್ಯುತ್ ಸರಬರಾಜು ಇದೆ ಅಲ್ಲವೆ?” ಶೀತಲ್ ಲಿಫ್ಟ್ ಕಡೆ ತೋರುತ್ತಾ ಕೇಳಿದಳು.

“ಸೋಲರ್ ಅಥವಾ ಯಾವುದೋ ಪರ್ಯಾಯ ಶಕ್ತಿ ಸರಬರಾಜಿಗೆ ಲಿಂಕ್ ಆಗಿರಬಹುದು, ನಮ್ಮಿಬ್ಬರ ಟೆಕ್ನಾಲಜಿ ಮಾಹಿತಿ ಸ್ವಲ್ಪ ಹಳೆಯದಾಗಿದೆ. ಗೊತ್ತಾಗುತ್ತಿಲ್ಲ...” ಎಂದ ಲಿಫ್ಟ್ ಬಟನ್ ಒತ್ತುತ್ತಾ ಉಜ್ವಲ್.

“ಈ ಕಟ್ಟಡ ಮತ್ತು ವ್ಯವಸ್ಥೆ ಸಹಾ” ಎಂದಳು ಶೀತಲ್ ಯೋಚಿಸುತ್ತಾ

“ಸ್ವಲ್ಪ ಸ್ವಲ್ಪ ನೆನೆಪಿಗೆ ಬರುತ್ತಿದೆಯೆ?” ಕೇಳಿದ ಉಜ್ವಲ್.

“ ಹೂಂ, ನಿನಗೆ?”

“ ನನ್ನ ಅಪ್ಪ ಅಮ್ಮ, ಮನೆ… ಈ ಕೆಲಸಕ್ಕೆ ಸೇರಿ ಈ ಪ್ರಯೋಗಕ್ಕೆ ಒಪ್ಪಿದ್ದು ಎಲ್ಲವೂ!… ಹೋಗುತ್ತಾ ಹೇಳುತ್ತೇನೆ” ಉಜ್ವಲ್ ಹೊಸ ಉತ್ಸಾಹದಿಂದ ನುಡಿದ

ಇಬ್ಬರೂ ಲಿಫ್ಟ್ ಒಳಗೆ ನೆಡೆದರು. ಒಳಗೆ ಯಾವುದೋ ಮುಗ್ಗುಲು ವಾಸನೆಯಂತಿತ್ತು.

500 ವರ್ಷ ಹಳೆಯದಲ್ಲವೇ, ಹವಾ ನಿಯಂತ್ರಿತ ಇದ್ದರೂ…ಮೊದಲೇ ಹೊಟ್ಟೆ ತೊಳೆಸುತ್ತಿರುವವರಿಗೆ ಇದೂ ಒಂದು ತೊಂದರೆ ಸೇರಿದಂತಾಯಿತು.

1000’- 900 ’-800’----100’ ಹೀಗೆ ಲಿಫ್ಟ್ ಮೇಲೆ ಸರಿಯುತ್ತಾ ಹೋಯಿತು

“ನಾಟ್ ಬ್ಯಾಡ್, 500 ವರ್ಷ ಹಳೆಯ ಲಿಫ್ಟಿಗೆ…”ಎಂದಳು ಶೀತಲ್.

ಅವರು ದೊಡ್ಡ ಹಾಲೊಂದರ ಮೂಲಕ ಹೊಸಬಂದಾಗ ಅಲ್ಲಿದ್ದ ಬಡುವಿನಲ್ಲಿ ಎರಡು ಬ್ಯಾಕ್-ಪ್ಯಾಕ್ ಇದ್ದವು. ತಂತಮ್ಮ ಬಟ್ಟೆಗಳನ್ನೂ ಬದಲಿಸಿ, ಮೇಲೆ ರೇಡಿಯೇಶನ್ ಕವಚ ಸೂಟ್ ಮತ್ತು ಶೂಸ್ ಧರಿಸಿ , ಮಾಸ್ಕ್ ನೊಂದಿಗೆ ದೊಡ್ಡ ಸ್ಟೀಲ್ ಬಾಗಿಲನ್ನು ಮುಟ್ಟಲು ಅದು ತಾನೇ ತೆರೆಯಿತು.

ಕಣ್ಣುಮುಚ್ಚಿಕೊಂಡು ಹೊರನಡೆದವರು ಸ್ವಲ್ಪ ಸ್ವಲ್ಪ ಮಾತ್ರವೇ ಅರೆಗಣ್ಣು ಬಿಟ್ಟು ಹೊರಗಿನ ದೃಶ್ಯವನ್ನು ಅವಲೋಕಿಸಿದರು. ಅದೊಂದು ನಾಶವಾದ ನಗರದ ಚಲನಚಿತ್ರದ ಸೆಟ್ಟಿನಂತಿತ್ತು.



ಹಗಲೋ ಸಂಜಗತ್ತಲೆಯೋ ಹೇಳಲಾಗುತ್ತಿಲ್ಲ...ಆಗಸದಲ್ಲಿ ಅಂತಾ ದಟ್ಟ ಮಶ್ರೂಮ್ ಕ್ಲೌಡ್ಸ್ ಎನ್ನುವಂತಾ ಅಣುವಿಕಿರಣದ ದಟ್ಟ ಮೋಡವೇನೂ ಕವಿದಿಲ್ಲ. ಸ್ವಲ್ಪ ಸಾಧಾರಣ ಬಿಳಿ ಮೋಡಗಳಿವೆ...

ಆದರೆ ಹಾಳು ಸುರಿಯುತ್ತಿರುವ ಆ ನಗರ! ಅಬ್ಬಾ ಎಂತಾ ಭಾರೀ ವಿನಾಶ.

ಎಲ್ಲಾ ಕಟ್ಟಡಗಳು ಆದಿಕಾಲದ ಪಳೆಯುಳಿಕೆಗಳಂತಿವೆ. ಸುತ್ತಲೂ ಕಾರು ಬಸ್ಸುಗಳ ಹಳೇ ಕಾಲದ ಕಳೇಬರಗಳಿವೆ. ರಸ್ತೆಯಲ್ಲಿ ಯಾರೂ ಕಾಣುತ್ತಿಲ್ಲ.

ಸ್ಮಶಾನ ಸದೃಶವಾದ ನಗರ ದಿಗಂತದವರೆಗೂ ಹಾಗೇ ಕಾಣುತ್ತಿದೆ. ಮುರುಕಲು ರಸ್ತೆಗಳು, ಬಿರಿದ ಭೂಮಿ...

ಎಲ್ಲಿಯೂ ಸರಿಯಾದ ವಿದ್ಯುತ್ ಕಂಬಗಳಿಲ್ಲ, ದಾರಿದೀಪಗಳಿಲ್ಲ...



“ಡಿಸ್ಟೋಪಿಯಾ ಎಂದರೆ ಇದೇ... ಅಳಿದ ಜಗತ್ತು... ವಾಸಿಸಲು ಯೋಗ್ಯವಲ್ಲದ್ದು ಎಂದು ಎಲ್ಲರೂ ತೊರೆದು ಹೋದಂತಿದೆ...” ಉಜ್ವಲ್ ಖೇದಮಿಶ್ರಿತ ಅಚ್ಚರಿಯಿಂದ ಉದ್ಗರಿಸಿದ.

“ಇಲ್ಲ, ಅಲ್ಲಿ ನೋಡು...ಜನರ ಕಾಲೋನಿಯಿದ್ದಂತಿದೆ” ಎಂದು ಮಿಣಕು ಮಿಣಕು ದೀಪಗಳು ಹೊಳೆಯುತ್ತಿದ್ದ ದೂರದ ಹಳೇ ಕಟ್ಟಡ ಸಮೂಹದತ್ತ ಕೈ ತೋರಿದಳು

ಶೀತಲ್. ಅವಳ ದನಿಯಲ್ಲಿ ಅಚ್ಚರಿ ಜತೆ ಆಶಾಭಾವನೆಯಿದೆ. ಇಬ್ಬರೂ ಅರಸ್ಪರ ನೋಡಿಕೊಂಡರು. "ಆಕರ್ಷಕ ಯುವತಿ, ಸಂಧರ್ಭಕ್ಕೆ ತಕ್ಕಂತಾ ಜೋಡಿ..." ಎಂದು ಉಜ್ವಲ್ ಭಾವಿಸಿದರೆ, "ಪರವಾಗಿಲ್ಲ, ಸಮರ್ಥ ವಿಶ್ವಾಸಿ ಯುವಕ" ಎಂದು ಅವಳು ಅವನ ಬಗ್ಗೆ ತೀರ್ಮಾನಿಸಿದಳು.

" ಅಲ್ಲಿ ಯಾರೋ ವಾಸಿಸುತ್ತಾರೆ..."ಎಂದು ಇಬ್ಬರೂ ಆ ಪಳೆಯುಳಿಕೆಗಳ ನಡುವೆ ಜೋಪಾನವಾಗಿ ಹೆಜ್ಜೆಯಿಡುತ್ತಾ.

"ನಾನು ನಮ್ಮ ತಂದೆ ತಾಯಿಗೆ ಒಬ್ಬನೇ ಮಗ, ಬೆಂಗಳೂರಿನಲ್ಲಿದ್ದೆ... ಅಪ್ಪ ಮಿಲಿಟರಿಯಲ್ಲಿದ್ದರು. ನಾನು 27ನೆ ವರುಷಕ್ಕೆ ಬಯೋ-ಟೆಕ್ ರೀಸರ್ಚ್ ಮುಗಿಸಿ ಇಂಡಿಯನ್ ಅಡ್ವಾನ್ಸ್ಡ್ ಬಯೋ ಸೆಂಟರಿಗೆ ಸೇರಿದೆ... ಆಗ ನಮ್ಮ ತಂದೆ ತೀರಿಕೊಂಡಿದ್ದರು, ತಾಯಿ ವೃದ್ಧಾಶ್ರಮ ಸೇರಿದ್ದರು, ನನ್ನ ಕೆಲಸದ ಸಲುವಾಗಿಯೇ ಸರ್ಕಾರ ಮಾಡಿದ್ದ ಏರ್ಪಾಟು ... ನಮ್ಮ ಬಾಸ್ ಕೊಟ್ಟ ಟ್ರೈನಿಂಗ್, ಇವೆಲ್ಲಾ ನೆನೆಪಿಗೆ ಬರುತ್ತಿದೆ"

"ಯೆಸ್ . ರಾಮ ನಾರಾಯಣ್ ಸರ್ ನೆನಪಿದೆ... ನಾನು ಪುಣೆಯವಳು ಆಗ 25 ವರ್ಷಕ್ಕೇ ಸೇರಿದ್ದೆ. ಅಮ್ಮ ಕನ್ನಡದವಳು, ಅಪ್ಪ ನನಗೆ ನೆನಪೇ ಇಲ್ಲ. ನಾನು...ಈಗ.." ಅವಳೇಕೋ ಒಮ್ಮೆ ಬಿಕ್ಕಿದಳು, "ತಬ್ಬಲಿ ... ನನ್ನ ಅಮ್ಮ ಕ್ಯಾನ್ಸರ್ ಆಗಿ ತೀರಿಕೊಂಡಿದ್ದಳು. ಇನ್ಯಾರೂ ನೆನಪಿಲ್ಲ... ಆನು ಮುಂಬೈ ವಿ.ವಿ ನಲ್ಲಿ ಬಯೋಟೆಕ್ ಮತ್ತು  ಫ್ಯೂಛರ್ ಟೆಕ್ನಾಲಜೀಸ್ ಬಗ್ಗೆ ರಿಸರ್ಚ್ ಮಾಡಿದ್ದೆ.. ನೋಡೋಣಾ... ಇನ್ನೂ ಏನೇನು ನೆನಪಿಗೆ ಬರುತ್ತಾ ಹೋಗುತ್ತದೆ ಎಂದು..."

"ಹಾಗೇ ನೋಡಿದರೆ ನಾವಿಬ್ಬರೂ ಈಗ ತಬ್ಬಲಿಗಳೇ ಈ ಲೋಕದಲ್ಲಿ , ಶೀತಲ್..ನಾವು ಈಗ ಸಂಗಾತಿಗಳಂತೆಯೇ ಇರಬೇಕು...ವಿಧಿಲಿಖಿತವಾದಂತಿದೆ..."ಉಜ್ವಲ್ ಅವಳ ಕೈ ತಟ್ಟಿ ಸಂತೈಸಿದ.

ಅವರು ಹೋಗುತ್ತಿದ್ದ ರಸ್ತೆಯಲ್ಲಿ ಹಳೆ ಮುರುಕಲು ಕಟ್ಟಡಗಳ ಜಗಳಿಯಲ್ಲಿ ಕೆಲವರು ರೋಗಿಷ್ಟ ಹತಭಾಗ್ಯ ವಯಸ್ಕರು ಕಾಣುತ್ತಿದ್ದಾರೆ, ಮೈಮೇಲೆ ಸರಿಯಾದ ವಸ್ತ್ರಗಳಿಲ್ಲ.. . ಕಲವೇ ಬಡಕಲು ಮೂಳೆ ಚಕ್ಕಳ ಕಾಣುವ ಬೀದಿನಾಯಿಗಳು ಅಲ್ಲಲ್ಲಿ ಮಲಗಿವೆ..

"ಇದು ಆಗಿನ ಬೆಂಗಳೂರಲ್ಲ.." ಶೀತಲ್ ಉಸುರಿದಳು.

ಆ ನಿರ್ಗತಿಕರು ಇವರತ್ತ ಒಮ್ಮೆ ಅಚ್ಚರಿಯ ದೃಷ್ಟಿ ಬೀರಿ ಮತ್ತೆ ಆಯಾಸವಾದವರಂತೆ ಕಣ್ಣು ಮುಚ್ಚಿಕೊಳ್ಳುತ್ತಿದ್ದಾರೆ. ಇವರನ್ನು ಮಾತಾಡಿಸುವ ಗೊಡವೆಗೂ ಬರುತ್ತಿಲ್ಲ..

"ಇದು ಮುಂಬೈ, ಅಥವಾ ಪುಣೆ ಸಮೀಪದ ಯಾವುದೋ ಪಟ್ಟಣ ಇರಬೇಕು ಶೀತಲ್. ಹಿಂದಿ-ಮರಾಠಿಯ ಬಣ್ಣ ಮಾಸಿದ ತುಕ್ಕು ಹಿಡಿದ ಬೋರ್ಡ್ಸ್ ಮಸುಕಾಗಿ ಕಾಣುತ್ತಿವೆ...ನಾವು ಇಲ್ಲಿನ ಪಶ್ಚಿಮ ಘಟ್ಟಗಳ ಬುಡದಲ್ಲಿ ಕ್ರಯೋಜೆನಿಕ್ ನಿದ್ರಾ ವಶರಾಗಿದ್ದೆವು ಹಾಗಾದರೆ" ಉಜ್ವಲ್ ಅಂದಾಜಿಸುತ್ತಾ ನುಡಿದ.

"ಹೌದು... ಕ್ರಯೋಜೆನಿಕ್ ಸ್ಲೀಪ್‌ಗಾಗಿಯೇ ಆ ಕೆಲವು ವರ್ಷಗಳ ಕೆಳಗೆ ಇಲ್ಲಿಗೆ ಬಂದಿದ್ದೆವು...ಆಗ ಅದು ಅದ್ವಿತೀಯ ರೋಮಾಂಚಕಾರಿ ವೈಜ್ಞಾನಿಕ ಅನ್ವೇಷಣೆಯಾಗಿತ್ತು." ಎನ್ನುತ್ತಾ ಶೀತಲ್ ತನ್ನ ಹಿಂದೆ ಬಿದ್ದಿದ್ದ ಒಂದು ಬಡಕಲು ನಾಯನ್ನು ದೂರ ನೂಕುತ್ತಾ ಇವನ ಹಿಂದೆ ಓಡೋಡಿ ಬಂದಳು

"ಹೌದು...ಅಂದರೆ ನಮ್ಮನ್ನು ವಿಟ್ರಿಫಿಕೇಶನ್ ತಂತ್ರದ ಮೂಲಕದ ಆ್ಯಂಟಿ ಫ್ರೀಜ್ ವಸ್ತುಗಳನ್ನು ಬೆರೆಸಿ ಆ ಪಾಡ್ ಚೇಂಬರುಗಳಲ್ಲಿ ನಮ್ಮ ದೇಹದ ನೀರಿನ ಅಂಶವನ್ನು ತೆರವು ಮಾಡಿದ್ದರು. -220 ಡಿಗ್ರೀ ಫ್ಯಾರನ್ಹೀಟ್ ಶೈತ್ಯಾಂಶಕ್ಕೆ ನಮ್ಮನ್ನು ತಲುಪಿಸಿ ನಮ್ಮ ದೇಹದ ಟಿಷ್ಯೂಗಳನ್ನು ಗಾಜಿನಂತೆ ಮಾರ್ಪಾಡು ಮಾಡಿ ಅವು ಸದಾ ಹೈಬರ್ನೇಶನ್ ಸ್ಥಿತಿಯಲ್ಲಿ ಇರುವಂತೆ ಮಾಡಿದ್ದರು... ಹಾಗಾಗಿಯೇ ನಮಗಿನ್ನೂ ಮೈ ಕೈ ಚಳಿ ಬಿಟ್ಟು ಬಿಡುಬೀಸಾಗಿಲ್ಲ, ಡಿಸೋರಿಯೆಂಟ್ ಆಗಿದ್ದೇವೆ,

ತಲೆನೋವು, ಸಂಕಟ ಇವೆಲ್ಲಾ ಇವೆ..ಇದೆಲ್ಲಾ ತಾತ್ಕಾಲಿಕ ಎಂದಿದ್ದರು ಆಗ...” ಶೀತಲ್ ತನಗೆ ನೆನಪು ಬಂದಿದ್ದನ್ನು ವಿವರಿಸುತ್ತಾ ಹೋದಳು.

ಇಬ್ಬರೂ ಮಾರ್ಗ ಮಧ್ಯೆ  ಕುಡಿಯುವ ನೀರಿನ ಕ್ಯಾಪ್ಸುಲ್ಸ್ ತೆರೆದು ನೀರನ್ನು ನುಂಗಿದರು.

“ಇದು ಮಾತ್ರ ನಮ್ಮ ಜೀವಜಲ...ಆರೋಗ್ಯಕರ ಎಂದಿದ್ದರು” ಶೀತಲ್ ಮತ್ತೆ ಹೊರಟು ನಿಂತಳು.

ಕೆಲಹೊತ್ತಿನಲ್ಲಿ ಒಂದು ಸ್ಲಮ್ ಕಾಲೋನಿಯ ತರಹದ ರೋಗಿಷ್ಟರ ಊರಿಗೆ ತಲುಪಿದ್ದರು.

ಅಯ್ಯೋ ಇದೇನು, ಚಿಕ್ಕವರು ದೊಡ್ಡವರು ಎನ್ನದೇ ಎಲ್ಲರೂ ಒಬ್ಬರನ್ನೊಬ್ಬರು ಹೊಡೆಯುತ್ತಾರೆ. ಹಣ, ಬ್ರೆಡ್ ನೀರಿನ ಬಾಟಲ್ ಎಲ್ಲಾ ಕಸಿದುಕೊಳ್ಳುತ್ತಾರೆ.. ಅಂಗಡಿಯವರ ಕೈಗಳಲ್ಲಿ ಗನ್ಸ್ ಇವೆ, ನಿರ್ದಯವಾಗಿ ಕಳ್ಳರನ್ನು ಶೂಟ್ ಮಾಡುತ್ತಾರೆ.

ಇದನ್ನೆಲ್ಲಾ ನೋಡಿ ಇಬ್ಬರೂ ಬಯೋಟೆಕ್ ವಿಜ್ಞಾನಿಗಳು ಚಕಿತರೂ ಭಯಭೀತರೂ ಆದರು.

ಓಡೋಡುತ್ತಾ ಬಂದ ಬಿಸ್ಕೆಟ್ಸ್ ಹಿಡಿದಿದ್ದ ಹರಕಲು ಜೀನ್ಸಿನ ತಲೆ ಕೆದರಿದ ನಿರ್ಗತಿಕ ತರುಣನೊಬ್ಬ ಇವರಿಗೆ ಡಿಕ್ಕಿ ಹೊಡೆಯುವಂತೆ ಸಿಕ್ಕು ದಿಟ್ಟಿಸಿ ನೋಡಿದ

“ಆಪ್ ಕೌನ್ ಹೆ?” ಎಂದ ಅಚ್ಚರಿ ಮಿಶ್ರಿತ ಹಿಂದಿಯಲ್ಲಿ..

ಅದನ್ನು ಗಮನಿಸಿ ಸುತ್ತಲಿದ್ದವರೆಲ್ಲಾ ತಮ್ಮ ನೂಕಾಟ ಹೊಡೆದಾಟ ನಿಲ್ಲಿಸಿ ನಿಧಾನವಾಗಿ ಬೆರಗುಗಂಗಳಿಂದ ಇವರತ್ತ ಸರಿದು ಬಂದರು.. ಒಬ್ಬೊಬ್ಬರ ಕೈಯಲ್ಲಿಯೂ ತುಕ್ಕಿಹಿಡಿದ ಮಚ್ಚು , ಗನ್, ಎಲೆಕ್ಟ್ರಿಕ್ ಶಾಕ್ ವೈರ್ಸ್ ಮುಂತಾದ

ಮಾರಕಾಸ್ತ್ರಗಳಿವೆ. 'ಅಯ್ಯೋ, ಸರಕಾರವಿಲ್ಲದೇ ಇಲ್ಲೆಲ್ಲಾ ಬರೇ ದೊಂಬಿದಾಸರ ಅಟ್ಟಹಾಸ, ಅರಾಜಕತೆ, ಅಪರಾಧ ಮೆರೆಯುತ್ತಿದ್ದಂತಿದೆ' ಎಂದನಿಸಿತು ಉಜ್ವಲ್‌ಗೆ

ಶೀತಲ್ ಗಾಬರಿಯಾಗಿ ಬ್ಯಾಗಿಂದ ಲೇಸರ್ ಗನ್ ತೆಗೆದಳು. ಟ್ರೈನಿಂಗ್ ಸಮಯಕ್ಕೆ ನೆನಪಿಗೆ ಬಂದಂತಿದೆ!

"ಬೇಡ ಸುಮ್ಮನಿರು, ಶಾಂತವಾಗಿ ಡೀಲ್ ಮಾಡೋಣ.."ಎಂದು ಅವರಲ್ಲಿ ಮುಂದೆ ನುಗ್ಗಿ ಬಂದಿದ್ದ ಗಡ್ಡಧಾರಿ ವಯಸ್ಕನೊಬ್ಬನಿಗೆ ಉಜ್ವಲ್ ಹೇಳಿದನು. ಅವನ್ಯಾರೋ ನಾಯಕನಂತೆ ವರ್ತಿಸುತ್ತಿದ್ದಾನೆ.

" ನೋಡಿ, ನಾವು ನಿಮ್ಮ ಊರಿನವರಲ್ಲ, ಹಳೇ ಯುಗದ ದಾರಿಹೋಕರು... ದಾರಿ ತಪ್ಪಿ ಬಂದಿದ್ದೇವೆ. ನಮ್ಮ ಬಳಿ ನಿಮಗೆ ಬೇಕಾಗುವ ಹಣ, ಆಹಾರ ಯಾವುದೂ ಇಲ್ಲ... ನಮ್ಮನ್ನು ಕೊಂದರೂ ನಿಮಗೆ ಪ್ರಯೋಜನವಿಲ್ಲ... ನಮಗೆ ಸಹಾಯಮಾಡಿ" ಉಜ್ವಲ್ ದನಿಯಲ್ಲಿ ಕೈಮುಗಿದು ಬೇಡಿದ.

ಶೀತಲ್ ಕೂಡಾ ತಲೆ ಬಾಗಿ ನಿಂತಳು

ಅವರೆಲ್ಲಾ ಸಾಮೂಹಿಕವಾಗಿ ಒಮ್ಮೆ ಓಹ್! ಎಂದರು, ಗದ್ದಲ ಮಾಡಿದರು. ಆ ನಾಯಕ ಕೈಯೆತ್ತಿ ಅವರನ್ನು ಸುಮ್ಮನಾಗಿಸಿದ.

ತನ್ನ ಅಮಲು ಹತ್ತಿದ್ದ ಕೆಂಗಣ್ಣು ಬಿಡುತ್ತಲೆ ಹೇಳಿದ." ಹಾ, ನೋಡಿದರೇ ಗೊತ್ತಾಗುತ್ತದೆ... ನಿಮ್ಮ ಈ ವೇಷಭೂಷಣ ಯಾವುದೂ ನಮ್ಮದಲ್ಲ... ನೀವು ನಮ್ಮೂರಿನವರಲ್ಲ, ಅತಿಥಿಗಳು ಅನ್ನಿ..."

ಶೀತಲ್ ಹೇಳಿದಳು, "ಹೌದು, ನಾವು ಈ ಕಾಲದವರೂ ಅಲ್ಲ... ಬಹಳ ಹಿಂದಿನವರು..."

ಉಜ್ವಲ್ ಸಹಾ ತಮ್ಮ ಸ್ಥಿತಿಯನ್ನು ಅರ್ಥಮಾಡಿಸಲು ಪರಿಪರಿಯಾಗಿ ಯತ್ನಿಸಿದ.

ಅವರ್ಯಾರಿಗೂ ಆ ಮಾತುಗಳು ಅರ್ಥವೇ ಆಗದಂತೆ ಪರಸ್ಪರ ಮುಖ ನೋಡಿಕೊಂಡರು.

“ಪುಣೆ? ಬೆಂಗಳೂರು?...ಮಹಾನಗರಗಳು, ಸರಕಾರಿ ಕೆಲಸ!...ಅದೆಲ್ಲಾ ಯಾವುದೂ ಈಗಿಲ್ಲ.. ನೀವ್ಯಾರೋ ಕನಸು ಕಂಡು ಬರುತ್ತಿದ್ದೀರಾ, ಏನಮ್ಮಾ?” ಎಂದಳು ಶೀತಲ್ ನತ್ತ ದುರುಗುಟ್ಟುತ್ತಾ ಬಂದ ಅವರಲ್ಲಿ ಒಬ್ಬಾಕೆ ತನ್ನ ಅಳುತ್ತಿದ್ದ ಮಗುವನ್ನು ಕೈಯ್ಯಲ್ಲಿ ಆಡಿಸುತ್ತಾ.

“ನಾವು ನಾಲ್ಕಾರು ಪೀಳಿಗೆಗಳಿಂದ ಈ ಹಾಳಾದ ನಗರಗಳಲ್ಲೇ ವಾಸಿಸುತ್ತಿದ್ದೇವೆ... ಮಕ್ಕಳು ವಯಸ್ಕರೂ ಎಲ್ಲರೂ...ಅನ್ನ ನೀರು, ಆರೋಗ್ಯಕರ ಹವಾ, ಕೆಲಸ ಮಾಡುವ ಸರಕಾರ ಯಾವುದೂ ಇಲ್ಲ...ಸರಕಾರ ಬಂದರೂ ಕೆಲವೇ ದಿನಗಳಲ್ಲಿ ದಂಗೆಯೆದ್ದು ಜನರು ಒಬ್ಬರನ್ನೊಬ್ಬರು ಕೊಂದು ಲೂಟಿ ಮಾಡುತ್ತಾರೆ” ನಾಯಕನ ಪಕ್ಕದಲ್ಲಿದ್ದ ವೃದ್ಧನೊಬ್ಬ ವಿವರಿಸಿದ.

“ಎಲ್ಲರೂ ಅನಾರೋಗ್ಯ ಮತ್ತು ಹಸಿವೆಯಿಂದ ಬೇಗ ಬೇಗ ಸಾಯುತ್ತಾರೆ...ನೀವಾರೋ ಅರ್ಥವಾಗುತ್ತಿಲ್ಲ..ಎಲ್ಲಿಂದ ಬಂದಿರಿ, ಹೇಗೆ?” ಆ ನಾಯಕ ಅವರಿಗೆ ಅವಸರದಿಂದ ಪ್ರಶ್ನಿಸಿದ.

ಉಜ್ವಲ್ ಕೈಯೆತ್ತಿ ಹಿಡಿದ.. “ನಮಗೆ ಅದಕ್ಕೆಲ್ಲಾ ಸಮಯವಿಲ್ಲ...ನಿಮ್ಮ ಊರಿನ ಹಿರಿಯ ನಾಯಕ ಯಾರು. ಅವರ ಬಳಿ ಕರೆದೊಯ್ಯಿರಿ, ಮಾತಾಡುವುದಿದೆ..”

ಶೀತಲ್ ಸಹಾ ತನ್ನ ದನಿಗೂಡಿಸಿದಳು

“ನಾವು ವಿದ್ಯಾವಂತರು, ವಿಜ್ಞಾನಿಗಳು...ನಮಗೆ ಒಳ್ಳೆಯದು ಮಾಡಿದರೆ...ನಾವು ನಿಮಗೆಲ್ಲಾ ಊರಿಗೆಲ್ಲಾ ಒಳ್ಳೆಯದಾಗುವ ಕೆಲಸ ಮಾಡುತ್ತೇವೆ... ಪ್ರಾಮಿಸ್!” ಆ ಮಾತು ಕೇಳಿ ಕೆಲಕಾಲ ಸುಮ್ಮನಾಗಿ ಎಲ್ಲರೂ ಕೈಯಲ್ಲಿದ್ದ ಅಸ್ತ್ರಗಳನ್ನು ಇಳಿಸಿದರು.

“ಇವರು ಕಳ್ಳರಂತೆ ಕಾಣುತ್ತಿಲ್ಲ... ನಮ್ಮಂತೆ ಅಂತೂ ಅಲ್ಲ... ಅದು ಖಂಡಿತಾ” ಎಂದನು ಕೊನೆಗೆ ಆ ನಾಯಕ .ಮಿಕ್ಕವರೂ ಹೂ-ಹೂಂ ಎಂದು ಗೋಣು ಆಡಿಸಿದರು.

ಅಬ್ಬಾ , ಮನುಷ್ಯತ್ವ ಇನ್ನೂ ಸತ್ತಿಲ್ಲ..ಸಾವಿನ ದವಡೆಯಲ್ಲಿಯೂ ಕರುಣೆ! ಎಂದುಕೊಂಡರು ಉಜ್ವಲ್ ಮತ್ತು ಶೀತಲ್.

“ನಾನು ನಿಮ್ಮನ್ನು ಅಪ್ಪಾ ನಾಯಕರ ಬಳಿ ಕರೆದೊಯ್ಯುತ್ತೇನೆ.. ಅವರೇ ನಮ್ಮ ಅಧ್ಯಕ್ಷರು..” ಎಂದನು ಮೊದಲು ಅವರಿಗೆ ಡಿಕ್ಕಿ ಹೊಡೆಯುವಂತೆ ಬಂದಿದ್ದ ಬಡ ತರುಣ ಸಂಭ್ರಮದಿಂದ.

'ಮತ್ತೆ ಸರಕಾರ ಇಲ್ಲ ಅನ್ನುತ್ತಿದ್ದಿರಿ?' ಎಂದು ಇವರಿಬ್ಬರೂ ಕೇಳಲಿಲ್ಲ..ಸದ್ಯಾ, ಹೇಗೋ!

**2**

ಅವರು ದೊಡ್ಡ ಹಜಾರವಿದ್ದ ಹಳೇ ಬಂಗಲೆಯಿಂದನ್ನು ಪ್ರವೇಶಿಸಿದರು, ಅದೂ ಶಿಥಿಲವಾಗಿದ್ದರೂ ಸ್ವಲ್ಪ ಕಟ್ಟಡದ ದುರಸ್ತಿ ರಿಪೇರಿ ಮಾಡಿದಂತಿದೆ. ವಿದ್ಯುತ್ ಇಲ್ಲದಿದ್ದರೂ ಉರಿಯುತ್ತಿರುವ ಪಂಜುಗಳನ್ನು ಗೋಡೆಗೆ ಸಾಲು ಸಾಲಾಗಿ ಕಟ್ಟಿದ್ದಾರೆ.

70 ವಯಸ್ಸಿನ ಬಿಳಿ ನಿಲುವಂಗಿ ಧರಿಸಿದ ಬೆಳ್ಳಿ ಗಡ್ಡದ ವೃಧ್ಧ ಅಪ್ಪಾ ನಾಯಕರು ಹಳೇ ಉಯ್ಯಾಲೆಯ ಮೇಲೆ ಕುಳಿತಿದ್ದವರು ಒಳಬಂದ ಇವರನ್ನು ನಿರುಕಿಸಿ ನೋಡಿ ಕೂರಲು ಹೇಳಿದರು. ಇಬ್ಬರೂ ಅಲ್ಲೇ ನೆಲದ ಮೇಲಿದ್ದ ಚಾಪೆಯ ಮೇಲೆ ಕುಳಿತರು. ಉಜ್ವಲ್ ಮತ್ತು ಶೀತಲ್ ಹೇಳಿದ್ದನ್ನು ಅಪ್ಪಾ ನಾಯಕರು ನಿರಾಕರಿಸಲೇ ಇಲ್ಲ

“ಈ ನಿಮ್ಮ ಸೂಟ್ ಅವಶ್ಯಕತೆ ಇಲ್ಲ, ನೀವು ಈ ರೇಡೀಯೇಶನ್ ಪ್ರೂಫ್ ಕವಚ ತೆಗೆಯಬಹುದು. ಈಗ ಗಾಳಿಯಲ್ಲಿ ಯಾವುದೂ ಅಂತಾ ಪ್ರಭಾವವಿಲ್ಲ.. ಈಗ ಇಲ್ಲಿರುವವರು , ಹುಟ್ಟಿನಿಂದಲೇ ವಂಶ ಪಾರಂಪರ್ಯವಾಗಿ ಈ ಅನಾರೋಗ್ಯವನ್ನು ಶಾಪವಾಗಿ ಪಡೆದು ಬಂದಿದ್ದಾರೆ. ಈಗ ಕಳೆದ 200 ವರ್ಷಗಳಲ್ಲಿ ಹವಾ

ಉತ್ತಮವಾಗಿದೆ, ಆದರೆ ಇಲ್ಲಿ ಇನ್ನೂ ಮಳೆಬೆಳೆ ಆಗಲು ನೆಲ ಸಿದ್ಧವಿಲ್ಲ...ದೂರದಿಂದ ಆಹಾರ ಸ್ವಲ್ಪ ಸ್ವಲ್ಪವೆ ಬರುತ್ತದೆ..ಅದಕ್ಕಾಗಿ ಕಾದಾಟ, ಎಲ್ಲಕ್ಕೂ ಅಭಾವ..."

"ನಾಯಕರೇ, ನಾವು ಹೇಳಿದ್ದು.." ನೆನಪಿಸಿದನು ಉಜ್ವಲ್.. ಇಬ್ಬರೂ ಕವಚ ತೆಗೆದು ಕುಳಿತರು.

"ಹಾ... ನಮ್ಮ ತಾತ ಮುತ್ತಾತ ನಮಗೆ ಹೇಳಿದ್ದ ಆಗಿನ ವಿಶ್ವದ ಸಾಧನೆಗಳು ನಿಮ್ಮದು... ಇಲ್ಲಿಯೂ ಶಾಲೆಗಳು ತೆರೆದಾಗ, ತೆರೆದರೆ ಹೇಳಿಕೊಡುತ್ತೇವೆ..ಆದರೆ ನಿಮ್ಮನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ..ಅಲ್ಲದೇ ನೀವು ಅದೃಷ್ಟವಂತರೂ ಸಹಾ!" ಎಂದರು ಅವರಿಬ್ಬರಿಗೆ ಹಾಲಿನ ಪುಡಿ ಮಿಶ್ರಿತ ಪೇಯವನ್ನು ನೀಡಿದರು, ತಮ್ಮ ಡಬ್ಬಿಯಲ್ಲಿದ್ದ ಹಳೇ ಗೋಡಂಬಿ ದ್ರಾಕ್ಷಿ ಸಹಾ ತಿನ್ನಲು ಕೊಟ್ಟರು. ಇದು ಈಗ ಎಲ್ಲಿಯೂ ಸಿಗಲ್ಲ ಅಪರೂಪಕ್ಕೆ ದೊರೆತವು ಎಂದರು.

"ಅದೃಷ್ಟವಂತರೇ ನಾವು?.. ಸತ್ತು ಹೋಗುತ್ತೇವೆ ಎಂದುಕೊಂಡಿದ್ದೆವು!" ಶೀತಲ್ ಕಣ್ಣರಳಿಸಿ ಹೇಳಿದಳು

ಅಪ್ಪಾ ನಾಯಕರು ಮುಗುಳ್ನಕ್ಕರು. "ಇಲ್ಲ, ಸಾಯಬೇಕೆಂದರೆ ಸಾಯಬಹುದು...ಆದರೆ ಬದುಕಿ ಉತ್ತಮ ಆರೋಗ್ಯಕರ ಜಗತ್ತನ್ನು ಕಾಣಬೇಕಿಂದಿದ್ದರೆ ನೀವೂ ಅಲ್ಲಿಗೆ ಹೋಗಲೂಬಹುದು"

"ಅಲ್ಲಿಗೆ?" ಇಬ್ಬರು ಒಟ್ಟಿಗೆ ಉದ್ಗರಿಸಿದ್ದರು.

"ಇಲ್ಲಿಂದ ೩೦೦೦ ಕಿಲೊಮೀಟರ್ ದೂರದಲ್ಲಿ ಭಾರತ- ಅಮೇರಿಕಾ - ರಷ್ಯಾ ಸೇರಿ ನಿಯೋಲ್ಯಾಂಡ್ ಎಂಬ ಯುಟೋಪಿಯನ್ ಜಗತ್ತನ್ನು ಕಟ್ಟಿದ್ದಾರೆ. ಅದೊಂದು ಅದ್ಭುತ ವೈಜ್ಞಾನಿಕ ಲೋಕ!..ಅಸಾಧಾರಣವಾದ ಪ್ರಗತಿಯಿರುವ ಮಾಡರ್ನ್ ವರ್ಲ್ಡ್!"

ವಿಜ್ಞಾನಿಗಳಿಬ್ಬರೂ ನಿಬ್ಬೆರಗಾಗಿ ಕೇಳಿಸಿಕೊಳ್ಳಹತ್ತಿದರು.

“ಅಲ್ಲಿಗೆ ಅನಿಯಮಿತ ವಿದ್ಯುತ್ ಸರಬರಾಜು ಉಂಟೂ ನೀರು ಆಹಾರ ಎಲ್ಲಾ ಉಂಟು..., ಅಲ್ಲಿಗೆ ಪ್ರತ್ಯೇಕ ಗಾಜಿನ ವಿಶಾಲ ಆಕಾಶ ಕವಚವಿದ್ದು ಒಳಗೆ ಕೃತಕ ವಾತಾವರಣವುಂಟು..ಸ್ವರ್ಗದಂತಾ ಸೀಮೆ ಕಟ್ಟಿ ಬಾಳುತ್ತಿದ್ದಾರೆ. ಒಂದು ರೀತಿಯ ಸ್ಪೇಸ್ ಕಾಲೋನಿ ಮಾದರಿ ಈ ಭೂಮಿಯಲ್ಲೇ...”

“ಹಾ, ಅದು ಎಲ್ಲಿದೆ?. ನೀವೆಲ್ಲಾ ಯಾಕೆ ಅಲ್ಲಿಗೆ ಹೋಗಿಲ್ಲ?” ಎಂದನು ಆಶ್ಚರ್ಯಚಕಿತನಾಗಿ ಉಜ್ವಲ್.

ಅಪ್ಪಾ ನಾಯಕರು ತಲೆದೂಗಿ ನಕ್ಕರು. “ನನಗೆ ಗೊತ್ತು ಈ ಪ್ರಶ್ನೆ ಬರುತ್ತದೆಂದು...

ಆದರೆ ನಮ್ಮವರ್ಯಾರಿಗೂ ಎಲ್ಲಿಗೂ ಹೋಗುವುದರಲ್ಲಿ ಆಸಕ್ತಿಯೇ ಇಲ್ಲ. ಅವರಿಗೆ ಆಸೆ ಅಭಿಲಾಷೆಗಳೇ ಇಲ್ಲದೇ ನಿಕೃಷ್ಟವಾದ ಅಪರಾಧಿ ಜೀವನ ನಡೆಸುತ್ತಿದ್ದಾರೆ..ಅಲ್ಲದೇ ನಿಯೋಲ್ಯಾಂಡ್ ತಲುಪಲು ಇದ್ದ ಒಂದೇ ಸಂಪರ್ಕ ಮಾರ್ಗ ಇಂಡೋ-ಟಿಬೆಟ್ ಮೆಟ್ರೋ ರೈಲು ಲೈನು...ಆದರೆ ಅದು ಸಂಚಾರ ನಿಲ್ಲಿಸಿ ಹಲವು ದಶಕಗಳೇ ಆದವು...”

“ಮತ್ತೆ ನಮ್ಮನ್ನು ಅದೃಷ್ಟವಂತರು ಎನ್ನುತ್ತೀರಲ್ಲ?” ಶೀತಲ್ ದನಿಯಲ್ಲಿ ನಿರಾಸೆಯ ಎಳೆಯಿತ್ತು.

“ಇತ್ತ ಬನ್ನಿ...” ಎಂದು ನಿಗೂಢವಾಗಿ ಮಾತಾಡುತ್ತಾ ಗೋಡೆಯ ಮೇಲಿದ್ದ ಹಳೆ ಪ್ರಪಂಚದ ಒಂದು ನಕ್ಷೆ ತೋರಿಸಿದರು ಅಪ್ಪಾ ನಾಯಕ.

ಅಲ್ಲಿ ಭಾರತದ ಪಕ್ಕ ಸ್ವತಂತ್ರವಾದ ಟಿಬೆಟ್ ದೇಶದ ನಕ್ಷೆಯಿದೆ.




“ಇದೋ ಇಲ್ಲಿದೆ...ಟಿಬೆಟ್ ದೇಶ ಸ್ವಾತಂತ್ರ್ಯ ಪಡೆದು 400 ವರ್ಷಗಳಾದವು..ಭಾರತ ಅವರಿಗೆ ಇನ್ನಿಲ್ಲದ ಸಹಾಯ ಮಾಡಿತು...ಅದರಲ್ಲಿ ಈ ಮಹಾರಾಷ್ಟ್ರದ ಪುಣೆಯಿಂದ ಅಲ್ಲಿಯವರೆಗಿನ ಮೆಟ್ರೋ ಟ್ಯೂಬ್ ರೈಲು ಒಂದು, ಬಹುಕೋಟಿ ವೆಚ್ಚದ ಮಹತ್ವಾಕಾಂಕ್ಷೆಯ ಯೋಜನೆ..ಅದು ಉಚಿತವಾಗಿಯೂ ಜನರನ್ನು ಅಲ್ಲಿಗೆ ಕೊಂಡೊಯ್ಯುತ್ತಿತ್ತು..ಆದರೆ ಅದನ್ನು ಈಗ ಓಡಿಸಲು ನಮ್ಮಲ್ಲಿ ಯಾರಿಗೂ ಬರುವುದಿಲ್ಲ..ಅದರ ಡ್ರೈವರುಗಳು ಇಲ್ಲೇ ಸತ್ತು ಹೋದರು..ಅದೇಕೋ

ನಿಯೋಲ್ಯಾಂಡಿನವರು ಈ ಬಡಪ್ರದೇಶದತ್ತ ಮತ್ತೆ ತಿರುಗಿಯೂ ನೋಡಿಲ್ಲ, ರೈಲು ಸಂಚಾರವನ್ನೂ ಆರಂಭಿಸಿಲ್ಲ....ಆದರೆ ರೈಲು ಮಾತ್ರ ಇಲ್ಲೇ ಇದೆ...."

"ಹಾಗಾದರೆ..." ಉಜ್ವಲ್ ತಲೆಯಲ್ಲಿ ಐಡಿಯಾ ಒಂದು ಮೊಳಕೆಯೊಡೆಯುತ್ತಿದೆ.

ಅವನ ಮಾತನ್ನು ಥಕ್ಕನೆ ಹಿಡಿದರು ಅಪ್ಪಾ ನಾಯಕ.

"ಹೌದು, ನೀವಿಬ್ಬರೂ ಮೆಟ್ರೋ ರೈಲು ಆಟೋಮೇಟಿಕ್ ಪೈಲೆಟ್ ಉಪಯೋಗಿಸಿ ಓಡಿಸಬಲ್ಲಿರಾ? ನಿಮ್ಮ ಆ ಕಾಲದ ಎಲ್ಲಾ ವಿದ್ಯುತ್ ಬಂಡಿಗಳಂತೆ ಚಾಲನೆಯ ವ್ಯವಸ್ಥೆ ಇರುತ್ತದೆ..ಅದನ್ನು ನೋಡಿಕೊಂಡು ಓಡಿಸಬೇಕು...ಹಾಗಾದರೆ...!"ಎಂದು ಮಾರ್ಮಿಕವಾಗಿ ನಿಲ್ಲಿಸಿದರು ವೃದ್ಧ ನಾಯಕ.

ಅರೆ ಕ್ಷಣದ ಮೌನ ಮುರಿದು ಉಜ್ವಲ್ ಘೋಷಿಸಿಬಿಟ್ಟ. "ಆಟೋ ಪೈಲೆಟ್ ಎಂಜಿನ್? ನಾವು ಓಡಿಸುತ್ತೇವೆ... ನಮಗೆ ದಾರಿ ತೋರಿಸಿ!"

## ಅಧ್ಯಾಯ 2- ಉಳಿದ ಜಗತ್ತು:

**1**

ತನ್ನ ಕೈಗೆ ಅಪರೂಪಕ್ಕೆ ಸಿಕ್ಕ ಅಪ್ಪಾ ಸಾಹೇಬರ ಫೋರ್ಡ್ ಎಸ್ ಯುವಿ ಯನ್ನು ವೇಗದ ಮಿತಿಯಿಲ್ಲದಂತೆ ಗುರಿ ಮುಟ್ಟುವ ತನಕ ಓಡಿಸುವೆನೆಂದು ಶಪಥ ತೊಟ್ಟಿದ್ದನೇನೋ ಆ ತರುಣ,

ಆ ಕೆಟ್ಟು ಹಾಳಾಗಿದ್ದ ಗತಕಾಲದ ರಸ್ತೆಯಲ್ಲಿ ಒಳಗೇ ನಾಲ್ಕು ಬಾರಿ ಕುಣಿದು ಕುಪ್ಪಳಿಸಿ ತಲೆ ತಾಗಿಸಿಕೊಂಡು ನರಳಿದ ನಂತರ ಶೀತಲ್ ಗೊಣಗಿದಳು, "ನೋಡಪ್ಪಾ ಮಿಸ್ಟರ್..."

"ತರುಣ್ ಅಂತಾ ನನ್ನ ಹೆಸರು!" ಎಂದ ಉತ್ಸಾಹದಿಂದ ಗೇರ್ ಬದಲಿಸುತ್ತಾ ಆ ತರುಣ.

“ನಿಧಾನಕ್ಕೆ ಓಡಿಸು...ನಾವೇನೂ ಇದರಲ್ಲಿ ನಿಯೋಲ್ಯಾಂಡ್ ತಲುಪಬೇಕಿಲ್ಲ..ಕೇವಲ ಅಂಡರಗ್ರೌಂಡ್ ಮೆಟ್ರೋ ನಿಲ್ದಾಣ ಮಾತ್ರ...” ಉಜ್ವಲ್ ಅವನಿಗೆ ಸಾವಧಾನ ಹೇಳಿದ.

ರಸ್ತೆಯಲ್ಲಿ ಒಮ್ಮೆ ನಿಲ್ಲಿಸಿ ಪ್ರೋಟೀನ್ ಪಿಲ್ಸ್ ಮತ್ತು ನೀರಿನ ಕ್ಯಾಪ್ಸುಲ್ಸ್ ಸೇವಿಸಿದರು. ತರುಣ್ ಸಹಾ ಅದನ್ನು ಸೇವಿಸಿ ಇನ್ನೂ ಹುಚ್ಚು ಹಿಡಿದವನಂತೆ ಉದ್ರಿಕ್ತನಾಗಿ ಗಾಡಿ ಓಡಿಸಿದ ಅಷ್ಟೇ.

ನಾಲ್ಕು ಗಂಟೆಗಳ ಪ್ರಯಾಣದ ನಂತರ ಇಬ್ಬರೂ ಸ್ಟೇಷನ್ ಇದ್ದ ನೆಲಮಾಳಿಗೆಯ ಪ್ರವೇಶದ್ವಾರವನ್ನು ಪತ್ತೆ ಹಚ್ಚಿ ಇಳಿದರು. ಸುತ್ತಲೂ ಪೊದೆ, ಮಣ್ಣು ಕಲ್ಲು ಕಸ ಮುಚ್ಚಿದ್ದರಿಂದ ಸ್ವಚ್ಚಗೊಳಿಸಲು ಬಹಳ ತಿಣುಕಬೇಕಾಯಿತು. ಇವರನ್ನು ಇಳಿಸಿ ತರುಣ್ ಪುರ್ರನೆ ಮಾಯವಾಗಿದ್ದ.

“ಓಹ್, ನಾವಿದನ್ನು ಡ್ರೈವ್ ಮಾಡಬಹುದು!” ಎಂದ ಉಜ್ವಲ್ ಹಳೆ ಕಾಲದ ಮೆಟ್ರೋ ರೈಲನ್ನು ಕಂಡು ಆಶಾಭಾವದಿಂದ.

ಪ್ಲಾಟ್‌ಫಾರಂ, ಸ್ಟೇಷನ್ ಗೋಡೆಗಳೆಲ್ಲಾ ಈಗ ಶಿಥಿಲಾವಸ್ಥೆಯಲ್ಲಿದ್ದರೂ ಫ್ಯೂಚರಿಸ್ಟಿಕ್ ಡಿಸೈನ್ ಎಂದು ಹೊಸಬಗೆಯ ಆಸ್ಟೆನಿಕ್ಟಿಕ್ ಸ್ಟೈನ್ಲೆಸ್ಸ್ ಸ್ಟೀಲ್ ಉಕ್ಕಿನ ಮೇಲ್ಪದರ ಇರುವ ರೈಲು ಎಂಜಿನ್ ಕೋಚುಗಳು ಸ್ವಲ್ಪವೂ ತುಕ್ಕು ಹಿಡಿಯದಿದ್ದುದು ಒಂದು ಆ ಕಾಲದವರ ಅಪೂರ್ವ ಸಾಧನೆ ಎಂದನಿಸಿತು ಉಜ್ವಲ್-ಶೀತಲರಿಗೆ.

“ಜೋಪಾನ, ಬೀಳದೇ ನನ್ನ ಕೈ ಹಿಡಿದು ಬಾ...” ಎಂದು ಶೀತಲಳ ಕೈ ಹಿಡಿದು ಪಾಚಿ, ಪೊದೆ ಗಟ್ಟಿದ ನೆಲದ ಮೇಲೆ ಜಾಗ್ರತೆಯಾಗಿ ಹೆಜ್ಜೆಹಾಕುತ್ತಾ ಎಂಜಿನ್ ಬಳಿ ನಡೆದ ಉಜ್ವಲ್.

“ಇದರ ಪವರ್ ಸಪ್ಲೈ  ಉಜ್ವಲ್? ಸ್ಟೇಷನ್ನಿನದಂತೂ ಯಾವುದೋ ಕಾಲದಲ್ಲಿ ಹಾಳಾಗಿ ಹೋಗಿದೆ.” ರೈಲಿನ ಕೋಚುಗಳ ಮಂದ ದೀಪಗಳ ಬೆಳಕಷ್ಟೇ ಅವರಿಗೆ ಲಭ್ಯವಿತ್ತು.

ಸುತ್ತಲೂ ಮುಗ್ಗುಲು ವಾಸನೆ ಮತ್ತು ಸೆಖೆ!

ಎಂಜಿನ್ ಬಾಗಿಲು ಲಾಕ್ ಆಗಿತ್ತು. ಅದರ ಕೀ ಯಾರ ಬಳಿ ಇತ್ತೋ ಈಗ ಯಾರಿಗೆ ಗೊತ್ತು? ಹಾಗಾಗಿ ಅದೃಷ್ಟವಶಾತ್ ಅಲ್ಲೇ ಮಾನ್ಯುಯಲ್ ಓವರ್-ರೈಡ್ ಎಂಬ ಸ್ವಿಚ್ ಇತ್ತು. ಅದನ್ನು ಉಪಯೋಗಿಸಿದಾಗ ಪಾಸ್ವರ್ಡ್ ? ಎಂದು ಮಿನುಗತೊಡಗಿತು

“ ಓಹ್ ಹೆಲ್!” ಎಂದು ಉದ್ಗರಿಸಿದಳು ಶೀತಲ್. ಅದು ಸಹಾ ಯಾರಿಗೆ ಗೊತ್ತು?

“ಉಜ್ವಲ್ ತನ್ನ ಬುದ್ದಿಯೆಲ್ಲಾ ಉಪಯೋಗಿಸಿ 911, 100, 1234 ಹೀಗೆ ವಿವಿಧ ಸಂಖ್ಯೆಗಳನ್ನು ಬಳಸಿ ನೋಡಿದನು... ಬಾಗಿಲು ತೆರೆಯುತ್ತಿಲ್ಲ... ಕೆಂಪು ದೀಪ ಕಾಣುತ್ತಿದೆ ಅಲ್ಲಿ..

“ಬಾಗಿಲು ತೆರೆಯೇ ಶೇಷಮ್ಮ...” (ಓಪನ್ ಸೆಸೇಂ ಕನ್ನಡದಲ್ಲಿ) ಎಂದು ಗೊಣಗಿದನು ಉಜ್ವಲ್ ಹತಾಶನಾಗಿ.

ಶೀತಲ್ ಇದ್ದಕ್ಕಿದ್ದಂತೇ ಚಿಟಿಕೆ ಹೊಡೆದು ಎಂಜಿನ್ನಿನ ಮುಂಭಾಗಕ್ಕೆ ಹೋಗಿ ಓಡಿ ಬಂದಳು, “ಟ್ರೈ 2619” ಅದನ್ನು ಬಳಸಿದಾಗ ಹೈಡ್ರಾಲಿಕ್ ಬಾಗಿಲು ಸುಯ್ಯನೆ ತೆರೆದೇ ಬಿಟ್ಟಿತು.

ಇಬ್ಬರೂ ಓಹ್ ಎಂದು ಖುಶಿಯಿಂದ ಕೂಗಿ ಒಬ್ಬರನ್ನೊಬ್ಬರು ಬಿಗಿಯಾಗಿ ಅಪ್ಪಿದರು ತಕ್ಷಣವೆ ಮೈ ಮರೆತೆವೆಂದು ಅರಿವಾಗಿ ಬೇರ್ಪಟ್ಟು ಎಂಜಿನ್ ಒಳಗೆ ನುಗ್ಗಿದರು.
“ ಏನದು 2619? ಈ ವರ್ಷವೆ?” ಉಜ್ವಲ್ ಬೆರಗಾಗಿ ಕೇಳಿದನು.

“ಅಲ್ಲ” ಶೀತಲ್ ಜಂಬವನ್ನು ನಟಿಸುತ್ತಾ, “ ಇದರ ರೂಟ್ ನಂಬರ್!. ಬೋರ್ಡ್ ಬರೆದಿದೆ ಮುಂದೆ..ಡ್ರೈವರಿಗೆ ಎಷ್ಟು ಸುಲಭ ಅಲ್ಲವೆ?”

“ಶಬಾಷ್, ಜಾಣೆ!”

ಅವರು ಈಗ ಡ್ರೈವಿಂಗ್ ಪ್ಯಾನೆಲ್ ಮುಂದೆ ಬಂದು ಮೈನ್ ಸ್ವಿಚ್ ಆನ್ ಮಾಡಿದರು. ಅಲ್ಲಿನ ಸುರಂಗದಿಂದ ರಿಮೋಟ್ ಸರ್ವರ್ ಮತ್ತು ಉಪಗ್ರಹದ ಮೂಲಕ ಸೋಲಾರ್ ಪವರ್ ಶೇಖರಿಸಿ ಹರಿಯಿತು.. ಫಕ್ಕನೆ ಎಲ್ಲಾ ದೀಪಗಳೂ ಹೊತ್ತಿಕೊಂಡವು.

“ಇಟ್ಸ್ ವರ್ಕಿಂಗ್!” ಉಜ್ವಲ್ ಸಂತಸದಿಂದ ಕೈಯುಜ್ಜಿಕೊಂಡನು.

ಸ್ವಲ್ಪ ಕಾಲ ಇಬ್ಬರೂ ಅಲ್ಲಿನ ವಿದ್ಯುನ್ಮಾನ ಮಾನಿಟರಿನಲ್ಲಿ ಹೆಲ್ಪ್ ಗೈಡ್ ಲೈನ್ಸ್ ಪೂರ್ತಿ ಓದಿ, ಎಲ್ಲಾ ಕಂಟ್ರೋಲ್ ಲೀವರ್ಸ್ ಫಲಕಗಳನ್ನು ಓದುತ್ತಾ, ಮುಟ್ಟಿ, ಆನ್+ಆಫ್ ಮಾಡಿ ಪರೀಕ್ಷೆ ಮಾಡಿಕೊಂಡರು. ಅವರಿಗೆ ಅರ್ಧಗಂಟೆಯೇ ಹಿಡಿಯಿತು.

“ಇದು ಹೊರಗಿನ ವಿದ್ಯುತ್ಚಕ್ತಿಯಲ್ಲೇ ನಡೆಯುವ ಎಂಜಿನ್-ಲೆಸ್ ಟ್ರೈನ್” ಉಜ್ವಲ್ ಮುಗುಳ್ನಕ್ಕನು.

“ಸದ್ಯ, ಮೋಟಾರ್ ಟ್ರಬಲ್ ಅಂತಾ ಬರುವುದಿಲ್ಲ” ಶೀತಲ್ ತಲೆದೂಗಿದಳು

ಕೊನೆಗೆ ಹೊರಡುವ ಮಾಡುವ ಮುನ್ನ ಶೀತಲ್ ಸೂಚಿಸಿದಳು, “ಈಗ ನಾವಿಬ್ಬರೇ ತಾನೇ?... ಎಲ್ಲಾ ಹಿಂದಿನ ಕೋಚುಗಳನ್ನು ಬಿಟ್ಟು ಹೋಗೋಣ.. ಲೋಡ್ ಕಡಿಮೆಯಾಗುತ್ತೆ”

“ಕರೆಕ್ಟ್, ಯೂ ಆರ್ ಸ್ಮಾರ್ಟ್... ಆಗ ನಾವು ಪವರ್ ಸೇವ್ ಮಾಡಿ, ಹೆಚ್ಚು ವೇಗವಾಗಿಯೂ ಹೋಗಬಹುದು...”

ಬರೇ ತಮ್ಮ ಕಂಟ್ರೋಲ್ ಕೋಚ್ ಮಾತ್ರ ಇಟ್ಟುಕೊಂಡು ಮಿಕ್ಕಿದ್ದನ್ನು ಡಿಸ್-ಎಂಗೇಜ್ ಮಾಡಿದ ಉಜ್ವಲ್.

ಆಟೋ-ಪೈಲೆಟ್  ಮೋಡ್ ಆನ್ ಮಾಡಿದಳು ಶೀತಲ್.

ಆ ಚಿಕ್ಕ ಟ್ರೈನ್ ನಿಧಾನವಾಗಿ ಮುಂದಕ್ಕೆ ಹೊರಳಿತು ಒಂದು ಜರ್ಕ್ ಕೊಟ್ಟು.

"ಅಬ್ಬಾ, ಇಷ್ಟು ವರ್ಷದ ನಂತರವೂ ಕೆಲಸ ಮಾಡುತ್ತಿದೆ...ಎಂತಾ ವಂಡರ್!" ಎಂದಳು ಶೀತಲ್."

"ದಾರಿಯಲ್ಲಿ ಸುರಂಗದಲ್ಲಿ ಯಾವುದಾದರೂ ಕಲ್ಲು, ಪೊದೆ ಮುಂತಾದ ಅಡೆತಡೆಗಳಿದ್ದರೆ ವಾರ್ನ್ ಮಾಡುತ್ತದೆ ಈ ಸೆನ್ಸರ್. ಆಗ ನಿಲ್ಲಿಸಿ ಅದನ್ನು ಕ್ಲಿಯರ್ ಮಾಡಬೇಕು...!" ಎಂದ ಉಜ್ವಲ್ ಮುಂದಿನ ಗಾಜಿನಲ್ಲಿ ನಿರುಕಿಸಿ ನೋಡುತ್ತಾ. ಸೆನ್ಸರ್ ಪರದೆಯಲ್ಲಿ ಮುಂದಿನ ಹಲವು ಕಿಮೀ ದೂರದ ಚಿತ್ರಗಳು ಮೂಡುತ್ತಿದ್ದವು. "ಇದೊಳ್ಳೆ ಗೇಮಿಂಗ್ ಸ್ಕ್ರೀನ್ ತರಹ ಇದೆ..." ಶೀತಲ್ ಅದನ್ನು ಎವೆಯಿಕ್ಕದೇ ನೋಡುತ್ತಿದ್ದಳು.

"ಇದರ ಕೌ ಕ್ಯಾಚರ್ ಆನ್ ಮಾಡುತ್ತೇನೆ.. ಚಿಕ್ಕ ಪುಟ್ಟ ಅಡ್ಡಿಗಳನ್ನು ಎತ್ತೆಸೆಯುತ್ತದೆ ಪಕ್ಕಕ್ಕೆ!" ಎಂದನು ಉಜ್ವಲ್.

ರೈಲಿನ ವೇಗ ಪಿಕಪ್ ಆಗಿ ಗಂಟೆಗೆ 500 ಕಿಮಿ ತಲುಪಿತು.

"ನಮ್ಮ ಅಂತಿಮ ನಿಲ್ದಾಣ 3500 ಕಿಮಿ ಲ್ಹಾಸಾ ನಿಯೋಲ್ಯಾಂಡ್ ಆಗಿದೆ.ಅದಕ್ಕೆ 7 ಗಂಟೆ ಸಾಕು... ನಾವು ಇಲ್ಲಿ ಕುಳಿತು ನೋಡಿಕೊಳ್ಳುತ್ತಿರಬಹುದು..."  ಉಜ್ವಲ್ ತೋರಿಸಿದ.  ಅಲ್ಲಿದ್ದ ಕುಶನ್ ಬೆಂಚಿನ ಮೇಲೆ ಆಸೀನರಾದರು ಇಬ್ಬರೂ.

"ಅದಕ್ಕೆ ಮುನ್ನ 6 -7 ಸ್ಟೇಷನ್ ಬರುತ್ತದೆ... ಅವುಗಳ ಇಂಡಿಕೇಟರ್ ಲೈಟ್ಸ್ ಎಲ್ಲಾ ಆಫ್ ಆಗಿದೆ" ಉಜ್ವಲ್ ಗಮನಿಸುತ್ತಾ ಹೇಳಿದ. "ಸೂರತ್- ಅಹ್ಮದಾಬಾದ್- ಕೋಟಾ- ಆಗ್ರ - ಡೆಲ್ಲಿ- ಕಾಟ್ಮಂಡು- ಲ್ಹಾಸಾ...ಇದರಲ್ಲಿ ಕೊನೆಯ ನಮ್ಮ ಸ್ಟೇಷನ್ನಿಗೆ ಮಾತ್ರ ದೀಪ ಹೊತ್ತಿದೆ.."

“ಅಂದರೆ ಇನ್ಯಾವ ಸ್ಟೇಷನ್ನೂ ಕೆಲಸಮಾಡುತ್ತಿಲ್ಲ..ಆ ಊರುಗಳೆಲ್ಲಾ ನಾಶವಾಗಿ ಹೋದವೋ?” ಶೀತಲ್ ನೊಂದ ದನಿಯಲ್ಲಿ ಅರ್ಥಮಾಡಿಕೊಂಡವಳಂತೆ ನುಡಿದಳು.

“ಇರಬೇಕು ಶೀತಲ್. ಒಟ್ಟಿನಲ್ಲಿ ಜಗತ್ತೇ ಹಾಳಾದ ಮೇಲೆ ಇನ್ನೇನು? ಮನುಷ್ಯ ತನ್ನ ಸ್ವಾರ್ಥ, ದ್ವೇಷ, ಶತ್ರುತ್ವಕ್ಕಾಗಿ ತಂತ್ರಜ್ಞಾನ ಮತ್ತು ವಿಜ್ಞಾನವನ್ನು ಬಳಸಿಕೊಂಡಾಗ ಹೀಗೇ ಆಗುವುದು.... ಸರ್ವನಾಶ!” ಎಂದನು ಉಜ್ವಲ್ ಮುಗಿದುಹೋದ ಅವರ ಹಳೇ ಜಗತ್ತನ್ನು ನೆನೆಸಿಕೊಂಡು. ಅವನನ್ನು ಸಂತೈಸುತ್ತಾ ಶೀತಲ್ ಕೈಯೊತ್ತಿ ನುಡಿದಳು

“ಆದರೆ ನಿಯೋಲ್ಯಾಂಡ್ ಎಂಬ ಪ್ರಗತಿಶೀಲ ಶಾಂತಿಪ್ರಿಯ ನಾಡನ್ನು ಮತ್ತೆ ಕಟ್ಟಿದರು...ಸೃಷ್ಟಿ ಅಂತ್ಯವಾಗಲು ದೈವ ಬಿಡಲಿಲ್ಲ...ಅಲ್ಲವೆ ಉಜ್ವಲ್?...” ಅವಳ ಮಾತನ್ನು ಕೇಳಿ ಅವನ ವಿಕ್ಷಿಪ್ತವಾಗಿದ್ದ ಮನಸ್ಸು ಪ್ರಸನ್ನವಾಯಿತು.

ರೈಲು ನಾಗಾಲೋಟದಲ್ಲಿದ್ದಂತೆ ಓಡುತ್ತಾ ಮುಂದೆ ಸಾಗುತ್ತಿದೆ... ಒಂದು ಗಂಟೆಯ ನಂತರ ಎರಡು ಸಲ ರೈಲುಕಂಬಿಗಳ ಮೇಲೆ ಕಲ್ಲುಬಂಡೆ, ಮಣ್ಣಿನ ರಾಶಿ ಬಿದ್ದಿದ್ದಾಗ ನಿಲ್ಲಿಸಬೇಕಾಯಿತು. ಕಲ್ಲುಬಂಡೆ ಹರಸಾಹಸ ಮಾಡಿದರೂ ತಳ್ಳಲಾಗಲಿಲ್ಲ. ಅದನ್ನು ರೈಲಿನಲ್ಲಿದ್ದ ಟೂಲ್ಸ್ ಕಿಟ್‌ನಿಂದ ಲೇಸರ್ ಕಟ್ಟರ್ ಗನ್ ಬಳಸಿ ಛಿದ್ರಛಿದ್ರಗೊಳಿಸಿದರು. ಮಣ್ಣನ್ನು ಗುಡಿಸಿ ಹಾಕಿ ಕ್ಲಿಯರ್ ಮಾಡಿ ಆಯಾಸವಾಗಿ ಬಂದು ಎರಡೆರಡು ಬಾರಿ ಫುಡ್ ಪಿಲ್ಸ್ ನೀರು ಸೇವಿಸಬೇಕಾಯಿತು. ಒಟ್ಟಿನಲ್ಲಿ ಒಂದು ಗಂಟೆ ತಡವೂ ಆಯಿತು.

“ನಿಯೋಲ್ಯಾಂಡ್ ತಲುಪುವವರೆಗೂ ಇದು ಸಾಕಾದೀತು ಅಂದುಕೊಳ್ಳೋಣ” ಎಂದು ಮಿಕ್ಕಿದ್ದನ್ನು ಎತ್ತಿಟ್ಟಳು ಶೀತಲ್.

ಮಧ್ಯೆ ಸ್ಟೇಷನ್ನುಗಳು ಅಂದರೆ ಅವುಗಳ ಕಳೇಬರುಗಳು ಬಂದು ಸರಿದುಹೋಗುತ್ತಿವೆ, ಪಾಳುಬಿದ್ದ ಗೂಡುಗಳಂತೆ.. ನೀರವ, ನಿರ್ಜನ.. ಇಡೀ ಮೆಟ್ರೋಜಗತ್ತಿನಲ್ಲೆಲ್ಲಾ ತಾವಿಬ್ಬರೇ ಎಂಬ ಒಂಟಿ ಭಾವ ಆವರಿಸಿ ಖಿನ್ನರಾದರೂ, ರೈಲು ಮಾತ್ರ ಸಾಗುತ್ತಿತ್ತು, ಅವರೂ ಅಂತಿಮ ಘಟ್ಟಕ್ಕೆ ತಲುಪುತ್ತಿದ್ದರು.

8 ಗಂಟೆಯ ಪಯಣದ ನಂತರ ಯಾವುದೋ ಸ್ವರ್ಗದಂತ ಗಾಜಿನ ಪಾರದರ್ಶಕ ಮಹಲುಗಳ ಕಟ್ಟಡದ ಕೆಳಗೆ ಎಲ್ಲೆಲ್ಲೂ ಬ್ರೈಟ್ ದೀಪಗಳ ಫಲಕಗಳಿದ್ದ ನಿಲ್ದಾಣವನ್ನು ಸಮೀಪಿಸಿದ್ದು ಅರಿವಾಯಿತು. ಅವರ ರೈಲಿನ ಕ್ಯಾಬಿನ್ನಲ್ಲಿ ತಕ್ಷಣ ಇಂಗ್ಲೀಷಿನಲ್ಲಿ ಒಂದು ಧ್ವನಿ ಉದ್ದೇಶಿಸಿ ವಿಚಾರಿಸಿತು, ಅದೊಂದು ರೋಬೋಟಿಕ್ ಯಾಂತ್ರಿಕ ದನಿಯಾಗಿತ್ತು

“ಟ್ರಿಪ್ 2619.?... ನೀವು ಹೇಗೆ ಬಂದಿರಿ?. ಅಲ್ಲಿ ಯಾರೂ ಇರಲಿಲ್ಲ, ನಿಮ್ಮ ಪರಿಚಯ ಮಾಡಿಕೊಳ್ಳಿ, ನಿಮ್ಮ 16 ಡಿಜಿಟ್ ಡ್ರೈವರ್ ಐಡಿ ಹೇಳಿ!”

“ನಾವು ನಿಮ್ಮ ನಾಡಿನವರಲ್ಲ, ನಿಯೋಲ್ಯಾಂಡ್!... ನಾವು ಹಿಂದಿನ ಕಾಲದ ಬದುಕುಳಿದ ವಿಜ್ಞಾನಿಗಳು...ಆತ್ಮರಕ್ಷಣೆಗಾಗಿ ನಿಮ್ಮಲ್ಲಿ ಶರಣಾಗಿ ಅಲ್ಲಿಂದ ಇಬ್ಬರು ಮಾತ್ರ ರೈಲು ನಡೆಸಿಕೊಂಡು ಬಂದಿದ್ದೇವೆ.”

“ಮ್ಯಾನುಯಲ್ ಸೂಪರ್ವಿಶನ್!... ರೆಸ್ಕ್ಯೂ ಟೀಂ ಕಮಿನ್!” ಎಂದು ಆ ರೊಬೋಟ್ ಮಾನವ ಮೇಲ್ವಿಚಾರಕರನ್ನು ಕೂಗಿತು.

“ಹೆಲೋ, ಹೂ ಇಸ್ ದಿಸ್? ನಾನು ನಂಬರ್ NL2223334445556.. ಸಾರಿ, ನಿಮಗರ್ಥವಾಗದು.... ನನ್ನ ಜೈವಿಕ ಹೆಸರು ರಾಜರ್ಸ್...ನೀವು ಯಾರು?, ಯಾವ ಸ್ಥಿತಿಯಲ್ಲಿದ್ದೀರಿ ಎಂದು ಹೇಳಿದರೆ ಮಾತ್ರ ಇಲ್ಲಿಂದ ಮುಂದಕ್ಕೆ ಪ್ರವೇಶ!” ಎಂದಿತೊಂದು ಹೊಸ ದನಿ.

“ಉಜ್ವಲ್ ಮತ್ತು ಶೀತಲ್ ನಮ್ಮ ಹೆಸರು, ಪುಣೆಯಲ್ಲಿ ಕ್ರಯೋಜೆನಿಕ್ ಸ್ಲೀಪ್ ಪ್ರಯೋಗದಲ್ಲಿ 500 ವರ್ಷಗಳ ಹಿಂದೆ ಇದ್ದವರು, ಅದರಿಂದ ಎಚ್ಚೆತ್ತು, ಆ ಡಿಸ್ಟೋಪಿಯನ್ ಲೋಕದಿಂದ ಒಬ್ಬರ ಸಹಾಯದ ಬಲದ ಮೇಲೆ ನಾವಾಗಿಯೇ ರೈಲು ಕೋಚ್ ನಡೆಸಿಕೊಂಡು ಬಂದಿದ್ದೇವೆ. ನಮ್ಮನ್ನು ರಕ್ಷಿಸಿ ಆಸರೆ ನೀಡಿ...”

“ಓಕೆ, ನಾನು ನಿಮ್ಮನ್ನು ಮೆಡಿಕಲ್ ಟೀಮ್ ಜತೆ ಪ್ಲಾಟ್‌ಫಾರಮ್ಮಿನಲ್ಲಿ ಎದುರು ನೋಡುವೆ, ನಿಮ್ಮನ್ನು ವಿಚಾರಿಸುವೆ, ಕಾಪಿ?”

“ಕಾಪಿ, ಓವರ್ ಅಂಡ್ ಔಟ್!” ಉಜ್ವಲ್ ಉತ್ತರಿಸಿ ಆಟೋ ಪೈಲೆಟ್ಟಿನಲ್ಲಿ ಸ್ಟೇಷನ್ ಎಂಬ ಬಟನ್ ಒತ್ತಿದಾಗ ಯಾವುದೋ ಪೂರ್ವನಿರ್ಧರಿತ ಪ್ಲಾಟ್ಫಾರಮ್ಮಿಗೆ ಅವರನ್ನು ಆ ಸಿಸ್ಟಮ್ ಸ್ವಯಂಚಾಲಿತವಾಗಿ ಕರೆದೊಯ್ದಿತು.

ಖಾಲಿಯಾದ ಒಂದು ಪ್ಲಾಟ್‌ಫಾರಮ್ಮಿನಲ್ಲಿ ರೈಲು ನಿಧಾನವಾಗಿ ನಿಲ್ಲುತ್ತಿದ್ದಂತೆ ಇವರಿಬ್ಬರೂ ಬೆರಗಾಗಿ ಮುಂದಿನ ಶತಮಾನವೊಂದರ ಅದ್ಭುತಲೋಕವೊಂದಕ್ಕೆ ಬಂದ ಅನುಭವವಾಗತೊಡಗಿತು. ಕೊನೆಗೂ ನಾಗರೀಕತೆ ಎದುರಾಗಿತ್ತು..

ಸುತ್ತಲೂ ಜಗಮಗಿಸುವ ಬೆಳಕಿನ ನಡುವೆ ಸ್ವಯಂಚಾಲಿತ ಬಾಗಿಲುಗಳು ಘೋಷಣೆಗಳನ್ನು ಬೇರೆ ಬೇರೆ ವಿದೇಶಿ ಭಾಷೆಗಳಲ್ಲಿ ಭಿತ್ತರಿಸುತ್ತಿರುವ ಗಾಳಿಯಲ್ಲಿ ನಿಂತ ಫ್ರೇಂಲೆಸ್ಸ್ ವಿದ್ಯುನ್ಮಾನ ಮಾನಿಟರ್ ಪರದೆಗಳು... ಅದರ ನಡುವೆ ನೀಲಿ ಫುಲ್ ಸೂಟ್ ಧರಿಸಿದ ಒಂದು ಸ್ವಾಗತ ತಂಡ ಇವರಿಗಾಗಿ ಕಾದಿತ್ತು.

ಮೊದಲಿಗೆ ಇವರನ್ನು ಬರಮಾಡಿಕೊಂಡವನೇ ರಾಜರ್ಸ್, ಅವನೊಬ್ಬ ಮಿಶ್ರಸಂಜಾತ ಯುವಕ. ಕಪ್ಪುಕೂದಲು ಆದರೆ ಆಂಗ್ಲೋಸ್ಯಾಕ್ಸನ್ ರಂಗಿನವನು.

ಉಜ್ವಲ್ ಮತ್ತು ಶೀತಲ್ ಇಬ್ಬರಿಗೂ ಇಂಗ್ಲೀಷಿನಲ್ಲಿ “ವೆಲ್ಕಮ್ ಟು ಯು ಬೋತ್” ಎಂದು ಕೈ ನೀಡಿ ಕುಲುಕಿದ. “ನಿಮಗೆ ಇಂಗ್ಲೀಷ್ ಅರ್ಥವಾಗುತ್ತೆ ತಾನೆ?”

ಇಬ್ಬರೂ ಅಲ್ಲಿನ ಮಾಯಾಲೋಕದಂತಹ ಪ್ರಪಂಚವನ್ನು ಕಂಡು. ಮೂಕವಿಸ್ಮಿತರಾಗಿದ್ದವರು ಸಮ್ಮತಿಸುತ್ತಾ ತಲೆಯಾಡಿಸಿದರು, ಅವನ ಹಿಂದೆ 2 ರೋಬೋಟುಗಳು ಮಾನವರಂತೆಯೇ ಕಾಣುತ್ತಿವೆ ಸೆಕ್ಯುರಿಟಿಗಾಗಿ ಕೈಯಲ್ಲಿ ತಾನಾಗಿಯೇ ಮಿನುಗುವ ಗನ್ಸ್ ಹಿಡಿದಿವೆ.  ಅವೇ ಹೊಸಬಗೆಯ ಹ್ಯುಮನಾಯ್ಡ್ ಆಂಡ್ರಾಯ್ಡುಗಳಿರಬೇಕು.

ಆ ತಂಡದಲ್ಲಿ ಇಬ್ಬರು ಬಿಳಿ ಕೋಟಿನ ಡಾಕ್ಟರುಗಳು ಇದ್ದಾರೆ. ಒಬ್ಬರು ಚೀನೀಯರಂತೆ, ಇನ್ನೊಬ್ಬರು ಭಾರತೀಯರಂತಿದ್ದಾರೆ.

“ನಾವು ನಿಮ್ಮನ್ನು ಆಂಟಿ-ರೇಡಿಯೇಶನ್ ಸ್ವೀಪಿಂಗ್ ಮಾಡುತ್ತೇವೆ.. ನಂತರ ಪೂರ್ಣ ಚೆಕಪ್ ಮಾಡಿ ಒಳಬಿಡುತ್ತೇವೆ.” ಎಂದು ಹತ್ತಿರ ಬಂದರು ಭಾರತೀಯ ವೈದ್ಯ.

ಇವರು ಆತನ ಸ್ಪಷ್ಟ ಹಿಂದಿ ಕೇಳಿ ಅಚ್ಚರಿಪಡುತ್ತಿರಲು ರಾಜರ್ಸ್ ನಕ್ಕು ಹೇಳಿದ

“ಹೌದು, ನೀವು ಕೇಳಿಸಿಕೊಂಡಿದ್ದು ಸರಿ.. ನಮ್ಮಲ್ಲಿ ಹಲವಾರು ಭಾಷೆಯ ಜನರಿದ್ದಾರೆ. ಎಲ್ಲಾ ಭಾರತೀಯ ಭಾಷೆಗಳು, ರಷ್ಯನ್, ಫ್ರೆಂಚ್, ಜಪಾನೀಸ್...ಇತ್ಯಾದಿ”

ವೈದ್ಯರಿಬ್ಬರೂ ಒಬ್ಬೊಬ್ಬರಾಗಿ ಉಜ್ವಲ್ ಮತ್ತು ಶೀತಲರ ಸುತ್ತಲೂ ಕ್ಷಣಮಾತ್ರದಲ್ಲಿ ಎಲೆಕ್ಟ್ರಾನಿಕ್ ಹೊದಿಕೆಯನ್ನು ಸೃಷ್ಟಿ ಮಾಡಿ ಕೈಯಲ್ಲಿದ್ದ  ಚಿಕ್ಕ ಡಿವೈಸುಗಳಿಂದ ರೀಡಿಂಗ್ ನೋಡಹತ್ತಿದರು. ನೀಲಿಬಣ್ಣದ ಬೆಳಕಿನ ಬೀಮ್ ಒಂದು ಇವರನ್ನು ಆಪಾದಮಸ್ತಕ ಹಾದುಹೋಯಿತು.

“ಚೆಕ್ಡ್ ಓಕೆ” ಎಂದು ಅವರು ಅದನ್ನು ನಿಲ್ಲಿಸಿದರು.

ರಾಜರ್ಸ್ ನುಡಿದನು, “ಉಜ್ವಲ್ ಮತ್ತು ಶೀತಲ್...ನಾನು ಸದ್ಯಕ್ಕೆ ನಿಮ್ಮ ಸಂಗಾತಿಯಾಗಿ ಎಲ್ಲಾ ಪ್ರಕ್ರಿಯೆಗಳನ್ನೂ ನಡೆಸಿಕೊಂಡು ಹೋಗುತ್ತೇನೆ..ಇದೇ ಮೊದಲ ಬಾರಿಗೆ ನೂರಾರು ವರ್ಷಗಳ ನಂತರ ನಾವು ನಿಮ್ಮ ಕಾಲದ ಜನರ ನಮೂನೆಯನ್ನು ನೋಡುತ್ತಿದ್ದೇವೆ, ಕುತೂಹಲಿಗಳಾಗಿದ್ದೇವೆ. ನೀವು ನನ್ನ ಮೇಲಧಿಕಾರಿಗಳು, ಮತ್ತು ಇಲ್ಲಿನ ವರಿಷ್ಟ ನಾಯಕರನ್ನು ಸಹಾ ಸಂದರ್ಶಿಸುವಿರಿ.”

“ತುಂಬಾ ಧನ್ಯವಾದಗಳು..”ಉಜ್ವಲ್ ಮನಸಾರೆ ನುಡಿದ.

ಶೀತಲ್, “ನಮಗೂ ಇದೆಲ್ಲಾ ಹೊಸದಾಗಿ ಕಾಣುತ್ತಿದೆ. ನೂರೆಂಟು ಪ್ರಶ್ನೆಗಳನ್ನು ನಾವೂ ಕೇಳುವುದಿದೆ...” ಎಂದಳು

“ಸಹಜವಾಗಿಯೇ...“ ಎಂದು ಮುಗುಳ್ನಕ್ಕ ರಾಜರ್ಸ್, “ಬನ್ನಿ , ಮೊದಲು ರೆಸೆಪ್ಷನ್ ರೂಮಿನಲ್ಲಿ ಕುಳಿತು ಮಾತಾಡೋಣ” ಎಂದು ಅವರನ್ನು ಲಗುಬಗೆಯಿಂದ ಒಳಕ್ಕೆ ಕರೆದೊಯ್ದನು.

“ನೀವು ನಿಮ್ಮ ಕಾಲದ ತರಹ ಜೂಸ್ ಮುಂತಾದ್ದನ್ನು ಸೇವಿಸುವಿರಿ ತಾನೆ?” ಎಂದು ಒಂದು ವಿಶಾಲವಾದ ಕೋಣೆಯಲ್ಲಿ ಗುಂಡನೆಯ ಟೇಬಲ್ ಸುತ್ತಲೂ ಇದ್ದ ಕುರ್ಚಿಗಳತ್ತ ಕೊಂಡೊಯ್ದನು. ಆ ಸೀಟುಗಳು ದೊಡ್ಡದೂ ಚಿಕ್ಕದೂ ಆಗಬಲ್ಲ ಹೊಸ ತಂತ್ರಜ್ಞಾನದ್ದಾಗಿದ್ದು ಅವರ ದೇಹಕ್ಕೆ ಸರಿಯಾಗಿ ತಾನೇ ಹೊಂದಿಕೊಂಡಿತು.

ಇಬ್ಬರಿಗೂ ಕೆಂಪನೆಯ ಆರೆಂಜ್ ಜೂಸಿನಂತಾ ಎರಡು ಗ್ಲಾಸುಗಳನ್ನು ಅಲ್ಲಿದ್ದ  ಸೀರೆ ಧರಿಸಿದ್ದ ವೈಟ್ರೆಸ್ಸ್ ಒಬ್ಬಳು ನೀಡಿ ನಮಸ್ಕರಿಸಿದಳು. ಅವಳು ನಡೆಯುವ ಬಗೆ ನೋಡಿಯೇ ಅದು ರೋಬೋಟ್ ಎಂದು ತಿಳಿದಿದ್ದು.

“ಹೌದು.. ನಮ್ಮ ಸಕಲ ಸೇವೆಗೂ ಸೆಂಟ್ರಲ್ ಕಂಟ್ರೋಲ್ ಇರುವ ರೋಬೋಟ್ಸ್ ಎಲ್ಲ ರಂಗದಲ್ಲಿಯೂ ನಮ್ಮ ಸಮಾಜದಲ್ಲಿವೆ...”.

“ಮೊದಲಿಗೆ ಇಲ್ಲಿ ನೋಡಿ” ಎಂದು ಅವನು ಕುಳಿತಲ್ಲಿಯೇ ಎದುರಿನ ಒಂದು ಗೋಡೆಯ ಬ್ಲೈಂಡ್ಸ್ ತೆರೆಸಿ ಹೊರಗಿನ ಪ್ರಪಂಚವನ್ನು ತೋರಿಸಿದ.


“ ಅಬ್ಬಾ..”

“ ಮೈ ಗಾಡ್... ಎಂದು ಅಲ್ಲಿನ ಮಾಯಾಜಾಲದ ಸೃಷ್ಟಿಯಂತಾ ಆಧುನಿಕ ಲೋಕವನ್ನು ಕಂಡು ಚಕಿತರಾಗಿ ಎದ್ದು ನಿಂತರು ಉಜ್ವಲ್ ಮತ್ತು ಶೀತಲ್.

“ನಮ್ಮ ಈ ಲೋಕ ಒಂದು ದೊಡ್ಡ ಸಿಲಂಡರಿನಂತೆ ಗೋಲಾಕಾರವಾಗಿ ಹೊಸಬಗೆಯ 20 ಅಡಿ ದಪ್ಪದ ಆಂಟಿ ಬ್ಲಾಸ್ಟ್ ಗಾಜಿನಿಂದ ಆವರಿಸಲ್ಪಟ್ಟಿದೆ.

ಇದು ಹಿಂದೆ ಸುಟ್ಟು ಹೋದ ಜಗತ್ತಿನ ನೆಲದ ಮೇಲೆಯೇ ಪೂರ್ಣವಾಗಿ ಹೊಸದಾಗಿ 200 ವರ್ಷಗಳ ಕೆಳಗೆ ಮಾತ್ರ ಪೂರ್ಣವಾಗಿ ಕಟ್ಟಿರತಕ್ಕುದು.. ಇದರ ನರ್ವ್ ಸೆಂಟರ್ ಅಂದರೆ ಇಂಧನ ಶಕ್ತಿ ಕೇಂದ್ರವಾಗಿ ಎನರ್ಜಿಗಾಗಿ ಬಾಹ್ಯಾಕಾಶದಿಂದ ಎರಡು ಸೋರ್ಸುಗಳನ್ನು ಅವಲಂಬಿಸಿದೆ. ಮೊದಲನೆಯದು ನಾವೆಲ್ಲರೂ ಹಾರಿಬಿಟ್ಟಿದ್ದ ಉಪಗ್ರಹಗಳ ದೈತ್ಯ ಸೋಲಾರ್ ಪ್ಯಾನೆಲ್ಲುಗಳಿಂದ ಸೂರ್ಯ ಶಕ್ತಿ ಸದಾ ದೊರೆಯುತ್ತದೆ.. ಅದರ ನಂತರ ಇದರಲ್ಲೇ ಪ್ಲಾಂಟುಗಳಲ್ಲಿ ರೀಸೈಕಲ್ ಮಾಡುಲ್ಪಡುತ್ತಿರುವ ಧೂಳಿಲ್ಲದ, ಮಾಲಿನ್ಯವಿಲ್ಲದ ನೀವು ಮುಂಚೆ ಏರ್ ಕಂಡೀಶನ್ ಎನ್ನುತ್ತಿದ್ದ ಮಾದರಿಯ ಹವಾ ವ್ಯವಸ್ಥೆಯಿದೆ…”

ಆಗಲೇ ಉಜ್ವಲ್ ಮತ್ತು ಶೀತಲ್ ಅಗಲೆ ಮೈ ಮುಟ್ಟಿ ನೋಡಿಕೊಂಡಿದ್ದು. “ಹೌದು, ಏಸಿ ಇರುವುದೇ ಗೊತ್ತಾಗುತ್ತಿಲ್ಲ…”



"ನಾವಿದ್ದನ್ನು ವೆದರ್ ಕಂಡೀಶನಿಂಗ್ ಎನ್ನುತ್ತೇವೆ ಅಷ್ಟೇ." ರಾಜರ್ಸ್ ತಲೆಯಾಡಿಸಿದನು. "ಅದಲ್ಲದೇ ನಮಗೆ ಹೊಸ ಬಗೆಯ ಶಕ್ತಿಕೇಂದ್ರವೊಂದು ನೂರು ವರ್ಷಗಳ ಕೆಳಗಷ್ಟೇ ಸಿದ್ಧಿಸಿದೆ. ಅದೇ ಬಾಹ್ಯಾಕಾಶದಲ್ಲಿ ಚಂದ್ರನ ಬಳಿ ನಮಗೆ ದೊರೆತ ಬ್ಲ್ಯಾಕ್ ಹೋಲ್ ಎನರ್ಜಿ!.."

"ಬ್ಲ್ಯಾಕ್ ಹೋಲ್ ಎಲ್ಲವನ್ನು ತಿಂದು ಹಾಕುತ್ತದೆ ಅಲ್ಲವೆ, ಸ್ಪೇಸ್ ಮತ್ತು ಟೈಮ್ ಅನ್ನೂ ಬಿಡದೇ?"

ಇಲ್ಲ ಪ್ರತಿ ಕಪ್ಪುಕುಳಿಯೂ ಸತತವಾಗಿ 10 ಮಿಲಿಯನ್ ಮೆಗಾವ್ಯಾಟುಗಳಷ್ಟು ಎನರ್ಜಿಯನ್ನು ಬಿದುಗಡೆ ಮಾಡುತ್ತಿರುತ್ತದೆ...ಅದನ್ನು ಪಡೆಯುವ ಬಗೆ ಮತ್ತು ಸಾಧನಗಳಿಗೆ ನಮ್ಮ ವಿಜ್ಞಾನಿಗಳು ಈ 500 ವರ್ಷದಿಂದ ಸತತ ಪರಿಶ್ರಮ ಪಡುತ್ತಲೇ ಇದ್ದರು... ಈಗತಾನೇ ಅದು ಕೈವಶವಾಗಿ ಅನಿಯಮಿತ ಎನರ್ಜಿ ನಮಗೆ ನೀಡುತ್ತಿದೆ"

"ಅಂದಹಾಗೆ..." ಉಜ್ವಲ್ ಮಧ್ಯಪ್ರವೇಶಮಾಡಿ, "ನೀವೆಲ್ಲಾ ಈ 500 ವರ್ಷಗಳಲ್ಲಿ ಹೇಗೆ ಬದುಕಿ ಬಾಳಿದಿರಿ?.. ಎಲ್ಲವೂ ಅಳಿದು ಹೋಗಿರಲಿಲ್ಲ ಅಲ್ಲವೆ..ಆ ಜಗತ್ತಿನ ತರಹ...?"

ರಾಜರ್ಸ್ ನುಡಿದ, "ಅದು ನನಗೆ ಹಳೆಯದು...ನಾನು ಹಿಸ್ಟರಿಯಲ್ಲಿ ಓದಿದ್ದೇನೆ.. ನೀವು ಹೇಳುವುದು ನಿಜ.. ಪೂರ್ತಿ ಜಗತ್ತೇ ಅಣುಯುದ್ಧದಿಂದ ವಿನಾಶವಾಗಿ ಬರಡಾಗಿತ್ತು, ಇಲ್ಲಿ ನಮ್ಮವರೂ ಕೆಲವರು ಅನಾರೋಗ್ಯಕ್ಕೆ ತುತ್ತಾಗದೇ ಈ ಹಿಮಾಲಯ ತಪ್ಪಲಿಗೆ ಬಂದು ಮೊದಲಿದ್ದ ಟಿಬೆಟ್ ಎಂಬ ಈ ಆರೋಗ್ಯಕರ ವಾತಾವರಣದಲ್ಲಿ ಬಾಳಿದರು. ಅವರು ಮಿಕ್ಕ ಜಗತ್ತಿನಂತೆ ಅರಾಜಕತೆ, ಹಿಂಸೆ, ದೌರ್ಜನ್ಯಕ್ಕಿಳಿಯಲಿಲ್ಲ.. ದ್ವೇಷ ಮತ್ತು ಯುದ್ಧದಿಂದಲೇ ಆಗ ಎಲ್ಲಾ ಒಮ್ಮೆ ನಾಶವಾಗಿದ್ದು, ಮತ್ತೆ ಅದು ಇಲ್ಲಿ ಮತ್ತೆ ಮರುಕಳಿಸಬಾರದು ಎಂದು ನಮ್ಮ ಹಿರಿಯರು ಸಿದ್ಧಾಂತ ಮಾಡಿ ಈ ಹೊಸ ನಾಡನ್ನು ಕಟ್ಟಿದರು...".

“ಇಲ್ಲಿ ನೋಡಿ. ನಿಮಗೇ ಅರ್ಥವಾಗುತ್ತದೆ ಇಲ್ಲಿನ ವಿಸ್ಮಯ ಜಗತ್ತು... ಇಲ್ಲಿ ಹಸಿರು ಕಾಡು ನದಿ ಜಲಪಾತಗಳಿವೆ, ಎಕೋ ಫ್ರೆಂಡ್ಲಿ ಎನ್ನುವಂತಾ ಎಲ್ಲ ಕಟ್ಟದಗಳೂ ಇವೆ.. ಯಾವುದೂ ನಷ್ಟವಾಗಿ ಮಾಲಿನ್ಯ ಉಂಟು ಮಾಡದು. ಇಲಿ ನೋಡಿ, ಜನರಿಗೆ ಎಲ್ಲಾ ವಿಧ್ಯಾಭ್ಯಾಸವೂ ಉಚಿತ. ಆಧುನಿಕ ಹಾಗೂ ಚೀನೀ ಮತ್ತು ಪಾಶ್ಚಿಮಾತ್ಯ ವೇದಾಂತ ಎಲ್ಲವನ್ನು ಕಡ್ಡಾಯವಾಗಿ ಹೇಳಿಕೊಡಲಾಗುತ್ತದೆ. ಎಲ್ಲಾ ಬಗೆಯ ಜನರೂ ಸಹಬಾಳ್ವೆ ಮಾಡುತ್ತಾರೆ. ನೌಕರಿಗಾಗಿ ಸೆಂಟ್ರಲೈಸ್ಡ್ ವ್ಯವಸ್ಥೆಯಲ್ಲಿ ಎಲ್ಲರೂ ದುಡಿಯುತ್ತಾರೆ. ಎಲ್ಲಾ ವಹಿವಾಟುಗಳು ಅನಿಯಮಿತ ವೈ ಫೈ ಸನ್ನದ್ಧ ಯೂನಿವರ್ಸಲ್ ಅಂತರ್ಜಾಲದ ಮೂಲಕ ನಡೆಯುತ್ತದೆ. ಪ್ರತಿಯೊಬ್ಬರಿಗೂ ಒಂದು ಕೋಡ್ ಇದೆ. ಅವರು ಎಲ್ಲಿಗೆ ಹೋದರೂ ಟ್ರ್ಯಾಕ್ ಆಗುತ್ತಾರೆ. ಅವರ ಖಾತೆ ತೆರೆದುಕೊಳ್ಳುತ್ತದೆ.  ಹಿಂಸೆ, ದೌರ್ಜನ್ಯ, ಅಪರಾಧ, ಅತ್ಯಾಚಾರ ಇವ್ಯಾವುದನ್ನು ನಾವು ಕೇಳರಿಯೆವು. ಅದನ್ನೆಲ್ಲಾ ಇತಿಹಾಸದ ಚಿತ್ರಗಳಲ್ಲಿ ನೋಡಿ ಅಸಹ್ಯ ಪಡುತ್ತೇವೆ. ಅವರೆಲ್ಲ ಎಷ್ಟು ಅನಾಗರೀಕರು, ಕ್ರೂರಿಗಳಾಗಿದ್ದರು ಎಂದುಕೊಳ್ಳುತ್ತೇವೆ. ಹಾಗಿಯೂ ಯಾರಾದರೂ ಅಪರಾಧ ಮಾಡಲೆಸಗಿದರೆ ಜೈಲಿನಲ್ಲಿ ಮರು ಶಿಕ್ಷಣ ಕೊಡುತ್ತೇವೆ.. ಸಾವಿರಕ್ಕೊಂದು ಮಾತ್ರ ಮರಣದಂಡನೆ ಕೊಟ್ಟರೆ, ಅಂತವರ ಅಂಗಾಂಗಗಳನ್ನು ಭವಿಷ್ಯದ ಮೆಡಿಕಲ್ ರೀಸರ್ಚಿಗಾಗಿ ದಾನ ಮಾಡಿಬಿಡುತ್ತೇವೆ. ಇಲ್ಲಿ ನೋಡಿ ಬಹಳ ಕನಿಷ್ಟ ದರದಲ್ಲಿ ಇಲ್ಲಿನ ಸಿಸ್ಟಮ್ ಕೊಟ್ಟ ಹಾರಾಡುವ ಟ್ಯಾಕ್ಸಿಗಳು- “ಫ್ಲಯಿಂಗ್ ಕ್ಯಾಬ್ಸ್” ನಲ್ಲಿ ಎಲ್ಲರೂ ರಸ್ತೆಯಿಂದ ಹತ್ತು- ಇಪ್ಪತ್ತು ಅಡಿ ಮೇಲೆ ಹಾರುತ್ತಾ ಓಡಾಡುತ್ತಿದ್ದಾರೆ. ಅಲ್ಲಲ್ಲಿ ನಿಲ್ದಾಣಗಳಿವೆ. ರಸ್ತೆಯಲ್ಲಿ ಮಾತ್ರ ಜನರು ಬಿಡುಬೀಸಾಗಿ ಓಡಾಡಬಹುದು...ಯಾವುದೇ ವಾಹನ ಸಂಚಾರ ಅಲ್ಲಿಲ್ಲ. ಇವೆಲ್ಲ ಸ್ಪೇಸ್ ಟೆಕ್ನಾಲಿಜಿಯ ಪ್ರಗತಿಯ ಮೂಲಕ ನಮಗೆ ಸಾಧ್ಯವಾದವು. ಎಲ್ಲವೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಯೇ ಆಗಿದೆ

.

ಇನ್ನು ವೈದ್ಯಕೀಯವಾಗಿ ಅಲೋಪತಿ, ಆಯುರ್ವೇದ ಮತ್ತು ಹೋಮಿಯೋಪತಿ ಮುಂತಾದ ಪದ್ದತಿಗಳನ್ನು ನಾವು ಉಳಿಸಿಕೊಂಡಿದ್ದೇವೆ.

"ಮದುವೆ, ಮಕ್ಕಳು ಮರಿ?" ಶೀತಲ್ ಅಚ್ಚರಿಯ ಪ್ರಶ್ನೆ.

"ಮದುವೆಯಾಗಿ ಎಂದು ಎಲ್ಲರಿಗೂ ಶಿಕ್ಷಣದ ಸಮಯದಲ್ಲಿಯೇ ಹೇಳಿಕೊಡುತ್ತೇವೆ, ಆದರೆ ಕಡ್ಡಾಯವಿಲ್ಲ. ಕೃತಕ ಗರ್ಭಧಾರಣೆ, ಭ್ರೂಣಗಳು ಉಚಿತವಾಗಿದೆ. ಜನರು ಅವನ್ನು ಪಡೆದುಕೊಳ್ಳಲೂಬಹುದು. ಮಕ್ಕಳನ್ನು ಅಧಿಕೃತವಾಗಿಯೇ ಯಾವ ರೀತಿಯಲ್ಲಿಯಾದರೂ ಪಡೆಯಬಹುದು.."

"ಆ ಪ್ರಕಾರ ಎಲ್ಲವೂ ಉಚಿತವಲ್ಲ ಆದರೆ ಕನಿಷ್ಟ ಚಾರ್ಜ್ ಎಲ್ಲಕ್ಕೂ ಇದೆ" ಎಂದು ಉಜ್ವಲ್ ವಿಶ್ಲೇಷಿಸಿದನು

"ಹೌದು ಇದೊಂದು ರೀತಿಯ ಸೆಲ್ಫ್ ಫುಲ್-ಫಿಲ್ಲಿಂಗ್ (ಸ್ವಯಂ-ಸಂತುಷ್ಟ) ಸಿಸ್ಟಂ.. ಜನರು ತಾವಾಗಿಯೇ ಎಲ್ಲವನ್ನೂ ಸುವ್ಯವಸ್ಥೆಯಲ್ಲಿಡಲು ದುಡಿಯುತ್ತಾರೆ, ಮೇಲುಸ್ತುವಾರಿಗೆ ತಕ್ಕಂತ ನ್ಯಾಯ ಬೆಲೆ ಮಾತ್ರ ಸರಕಾರ ಅವರಿಂದ ಪಡೆಯುತ್ತದೆ. ಆದರೆ ಈ ಸರಕಾರ ಏನೂ ನಿರಂಕುಶ ಅಧಿಕಾರಿ ಅಲ್ಲ.. ಸಂವಿಧಾನಬದ್ಧ ಅಧಿಕಾರ ವರ್ಗ ಅಷ್ಟೇ... ಜನರೇ ಆನ್ಲೈನ್ ಚುನಾವಣೆಯಲ್ಲಿ ಆಯ್ದ ವಿದ್ಯಾವಂತ ವಿವೇಕಿಗಳ ಕೌನ್ಸಿಲ್.. ಯಾವುದೇ ಅನ್ಯಾಯ ಇದರಲ್ಲಿ ನಮಗೆ ಕಂಡುಬಂದಿಲ್ಲ..."

500 ವರ್ಷ ಹಿಂದಿನ ಈ ವಿಜ್ಞಾನಿಗಳಿಗೆ ಈ ವಿವರಣೆಯ ನಂತರವೂ ಈ ವ್ಯವಸ್ಥೆ ಹೇಗೆಂದು ಅರ್ಥವಾಗಲೇ ಇಲ್ಲ.

ಅವರ ಸೋಜಿಗ ಕಂಡು, ಭಾರತೀಯ ವೈದ್ಯರು ಹೇಳತೊಡಗಿದರು, "ಇದನ್ನು ಕೇಳಿ ನಿಮಗೆ ಹೆಮ್ಮೆಯಾಗಬಹುದು. ಈ ಹೊಸ ನಾಡನ್ನು ಕಟ್ಟುವಲ್ಲಿ ಆಗ ಭಾರತ ಮುಖ್ಯಪಾತ್ರವನ್ನು ವಹಿಸಿತು. ನಮ್ಮ ಹಿರಿಯರು ವಿಜ್ಞಾನ ಮತ್ತು ತಂತ್ರಜ್ಞಾನದ ಜತೆ

ವಿವೇಕ, ಸಹಬಾಳ್ವೆ ಮತ್ತು ಶಾಂತಿಯ ಅಡಿಪಾಯ ಹಾಕಿ ಇದರ ಸಂವಿಧಾನ ಬರೆದರು..”

“ಅಂದರೆ ಈ ವಿಶ್ವ ಹೊಸ ಸಿದ್ಧಾಂತದ ಮೇಲೆ ಹುಟ್ಟಿಕೊಂಡಿತು.. ನಿಯೋಲ್ಯಾಂಡ್!” ಶೀತಲ್ ಉದ್ಗರಿಸಿದಳು.

“ನಮ್ಮ ಅನಾದಿಕಾಲದ ವೇದದಲ್ಲಿ ಹೇಳಿದಂತೆ ನಂಬಿ ಬಾಳಿದೆವು. ಸತ್ಯವೇ ಜ್ಞಾನ, ಅದುವೇ ನಾಶವಾಗದ ಅನಂತ ಸೃಷ್ಟಿ...” ವೈದ್ಯರು ಹೇಳುತ್ತಾ ಭಾವುಕರಾದರು.


ಚೀನೀ ವೈದ್ಯರು ದನಿಗೂಡಿಸಿದರು, “ನಮ್ಮ ಸಂವಿಧಾನದ ಮೊದಲ ವಾಕ್ಯ ಇಂತಿದೆ : ಅನಂತಂ ಬ್ರಹ್ಮಾ!..ಸೃಷ್ಟಿಯು ಸತ್ಯ ಮತ್ತು ನಿರಂತರ, ಅದು ನಿಲ್ಲದು ಎಂದು ಸಂಸ್ಕೃತದಲ್ಲಿ ಮಿತವಾದ ಅರ್ಥ...!”

ಚೀನೀ ವೈದ್ಯರ ಈ ವೇದಾಂತದ ನಿಷ್ಪಕ್ಷಪಾತ ವಿವರಣೆ ಕೇಳಿ ಕಂಡು ಇವರಿಬ್ಬರಿಗೂ ಸಂತಸಮಿಶ್ರಿತ ಆಶ್ಚರ್ಯ ಉಂಟಾಯಿತು.

“ಈಗ ಆ ಪ್ರಪಂಚ ಅದನ್ನೆಲ್ಲಾ ಮರೆತಿದೆ..ಅದಕ್ಕೇ ಅವರಿಗೆ ಅಲ್ಲಿಂದ ಹೊರಬರಲಾಗುತ್ತಿಲ್ಲ” ಉಜ್ವಲ್ ತಾವು ಬಿಟ್ಟುಬಂದ ಜಗತ್ತನ್ನು ನೆನೆಸಿಕೊಂಡು ನುಡಿದನು, ಶೀತಲ್ ಸಹಾ ಈ ಮಾತನ್ನೊಪ್ಪಿ ಮೌನಕ್ಕೆ ಶರಣಾದಳು.

“ಸರಿ, ನಾನು ಇನ್ನು ನಿಮ್ಮನ್ನು ಹೊರಗೆ ನಮ್ಮ ನ್ಯಾಚುರಲೈಜೇಶನ್ (ದೇಶೀಕರಣ) ಕಚೇರಿಗೆ ಕರೆದೊಯ್ಯುತ್ತೇವೆ. ನಿಮಗೆ ಇಲ್ಲಿನ ಎಲ್ಲ ಸೌಲಭ್ಯವನ್ನೂ ಹಂತಹಂತವಾಗಿ ಕೊಡುತ್ತೇವೆ. ಜತೆಗೆ ಒಂದು ಸಿಟಿಜೆನ್ (ನಾಗರೀಕ) ಕೋಡನ್ನೂ ಕೊಡಲಾಗುತ್ತದೆ.. ಬನ್ನಿ” ಎಂದು ರಾಜರ್ಸ್ ಅವರನ್ನು ಎಬ್ಬಿಸಿದನು.

ಕಟ್ಟಡದ ಹೊರಗೆ ಬಂದಾಗ ಆ ನಾಡಿನ ಅದ್ವಿತೀಯ ಸುಂದರ ಕಣ್ಮನ ಸೆಳೆಯುವ ವ್ಯವಸ್ಥೆಯನ್ನು ನೋಡಿದರು.




ಎಲ್ಲಾ ಬಗೆಯ ಜನರು ತಮ್ಮ ಪಾಡಿಗೆ ತಾವು ಕಾಲು ಹಾಕುತ್ತಿದ್ದಾರೆ. ಇವರು ಅಧಿಕಾರಿಗಳು ಮತ್ತು ವೈದ್ಯರ ಜತೆ ಇರುವುದನ್ನು ಕಂಡು ಸುಮ್ಮನೆ ನೋಡಿ ಸೌಜನ್ಯದಿಂದ 'ಹೆಲೋ' ಮಾತ್ರ ಹೇಳಿ ಮುನ್ನಡೆಯುತ್ತಿದ್ದಾರೆ,. ಆ ಡಿಸ್ಟೋಪಿಯದಂತೆ ಯಾರೂ ಆತಂಕ ಹುಟ್ಟಿಸುವಂತೆ ಸುತ್ತುವರೆಯುತ್ತಿಲ್ಲ.

"ಸ್ವಲ್ಪ ದೂರ ನಡೆಯೋಣ" ಎಂದರು ಉಜ್ವಲ್ ಮತ್ತು ಶೀತಲ್, ಅಲ್ಲಿನ ಬಣ್ಣದ ಮಾಯಾ ಜಗತ್ತನ್ನು ನೋಡಿ ತಣಿಯಲು ಉತ್ಸುಕರಾಗಿ.

ಸುಮಾರು ದೂರದವರೆಗೂ ಚಾಚಿರುವ ಗಾಜಿನ ದೊಡ್ಡ ಗೋಲಾಕಾರದ ಪ್ರಪಂಚ ಅದುವೇ.

ವಾಹ್...ಆದೊಂದು ಸಮೃದ್ಧ, ಸುಫಲ ಮತ್ತು ಸಫಲ ಪ್ರಪಂಚ... ಒಂದು ಇಂದ್ರಜಾಲದ ಸುಂದರ ಕನಸಿನಂತೆ ಭವ್ಯವಾಗಿದೆ. ಎಲ್ಲಾ ಎಷ್ಟು ಪ್ರಗತಿಶೀಲ ಮತ್ತು ಸೌಕರ್ಯಕರ!



ಅಲ್ಲಿಂದ ಇವರಿಗಾಗಿ ರಾಜರ್ಸ್ ಕರೆಸಿದ್ದ ಫ್ಲಯಿಂಗ್ ಕ್ಯಾಬ್ ಒಂದು ಸುಯ್ಯನೆ ಹಾರುತ್ತಾ ಮೆಟ್ಟಿಲುಗಳ ಬಳಿ ಬಂದು ಲಂಗರು ಹಾಕಿ ನಿಂತುಕೊಂಡಿತು. ಇವರು ಆರು ಜನ ಎಸ್ಕಲೇಟರಿನಲ್ಲಿ ಸುಲಭವಾಗಿ ಏರುತ್ತಾ ಹೋಗಿ ಒಳಗೆ ಕುಳಿತುಕೊಳ್ಳಲು ಸೀಟ್ ಬೆಲ್ಟ್ ತಾನೇ ಬಿಗಿದುಕೊಂಡಿತು. ಅದರ ರೋಬೋಟಿಕ್ ಡ್ರೈವರ್ "ಈಗ ಹೊರಡುತ್ತೇನೆ" ಎಂದು ಘೋಷಿಸಿದ. ಪೂರ್ವ ನಿರ್ಧರಿತ ಸ್ಥಳಕ್ಕೆ ಎಂದು ಅದರಲ್ಲಿ ಆಗಲೇ ಲೋಡ್ ಆಗಿತ್ತು.



ಅವರನ್ನು ಕಚೇರಿಗೆ ಕರೆದೊಯ್ಯಲಾಯಿತು. ಅಲ್ಲಿ ಹೊಸಬಗೆಯ ಗಾಳಿಯಲ್ಲಿ ತೇಲುವ ಮಾನಿಟರ್ ಉಳ್ಳ ಕಂಪ್ಯೂಟರುಗಳಲ್ಲಿ  ಹಲವು ಸಿಬ್ಬಂದಿ ಕೆಲಸದಲ್ಲಿ ತೊಡಗಿದ್ದರು. ಅವರೆಲ್ಲಾ ಬೇರೆ ಬೇರೆ ದೇಶ, ಜಾತಿಗೆ ಸೇರಿದವರು. ಭಾರತೀಯರು, ವಿದೇಶೀಯರು, ಆಫ್ರಿಕನ್ನರು, ಏಷ್ಯನ್ನರೂ ಇದ್ದರು. ಎಲ್ಲರೂ ನಗುನಗುತ್ತಾ ಯಾವ ಬಿಗುಮಾನವಿಲ್ಲದೇ ಉಜ್ವಲ್ ಮತ್ತು ಶೀತಲರನ್ನು ಸೌಜನ್ಯದಿಂದ ಸ್ವಾಗತಿಸಿ ಅವರ ನೋಂದಣಿ ಕೆಲಸ ಮಾಡಿಕೊಟ್ಟರು. ಅವರಿಗೆ ಹೊಸದಾದ ಮೈಗೆ ಅಂಟುವಂತಾ ಚಿಪ್ ಉಳ್ಳ ಐಡಿ ಒಂದನ್ನು ಲಗತ್ತಿಸಿದರು. ಇನ್ನು ಎಲ್ಲಿ ಹೋದರೂ ಅವರನ್ನು ಈ ನಂಬರಿನ ಮೂಲಕ ಗುರುತಿಸಿ ಅವರ ಖಾತೆ ತೆರೆದು ಅಲ್ಲಿ ಎಲ್ಲಾ ವಿವರಗಳು, ಅವರ ವ್ಯವಹಾರಗಳೂ ಪ್ರದರ್ಶಿತವಾಗುತವೆಂದು ಹೇಳಿದರು. ಇವರಿಗೆ ಬೇಕಾದಂತ ಭಾಷೆಯಲ್ಲಿ  ಸಿಬ್ಬಂದಿ ಸಂವಹಿಸಿದರು.

“ನೀವು ಹೇಗೆ ಇಂಗ್ಲೀಷ್, ಹಿಂದಿ ಮತ್ತು ಇತರ ಭಾರತೀಯ ಭಾಷೆಗಳನ್ನೂ ಸುಲಭವಾಗಿ ಮಾತಾಡಬಲ್ಲಿರಿ?” ಎಂದು ಒಬ್ಬ ಯುವತಿಯನ್ನು ಕುತೂಹಲ ತಡೆಯದೇ ಉಜ್ವಲ್ ಕೇಳಿಯೇ ಬಿಟ್ಟನು.

"ಅದು ನಮ್ಮ ಕರ್ತವ್ಯ, ಇಲ್ಲಿ ಯಾವುದೂ ಮುಖ್ಯವಲ್ಲದ್ದಲ್ಲ. ನಾವು ಸಿಬ್ಬಂದಿ ಸುಮಾರು 6 ರಿಂದ 8 ಭಾಷೆಗಳನ್ನು ಕಲಿತೇ ಇರಬೇಕು. ನಮಗೆ ಆ ರೀತಿ ಶಿಕ್ಷಣವಾಗಿರುತ್ತದೆ, ನಿಯೋಲ್ಯಾಂಡ್ ಈಸ್ ಫಾರ್ ಎವೆರಿಬಡಿ" ಎಂದು ಆಕೆ ನಗುತ್ತಾ ಉತ್ತರಿಸಿದಳು.

ನಂತರ ಅವರಿಗೆ ಸ್ನಾನಾದಿಗಳನ್ನು ಮುಗಿಸಲು ಬಾತ್ ರೂಮ್ ಕಾಂಪ್ಲೆಕ್ಸನ್ನು ಸಹಾ ತೋರಿಸಿದರು

"ಹೌದು , ಬಹಳ ದಿನದಿಂದ ಸ್ನಾನ ಮಾಡಿಲ್ಲ" ಎಂದು ಹೊರಟಳು ಶೀತಲ್

"ಏನಿಲ್ಲ, ಕೇವಲ 500 ವರ್ಷದಿಂದಷ್ಟೇ!" ಎಂದು ಚಟಾಕಿ ಹಾರಿಸಿದನು ಉಜ್ವಲ್.

ಅದನ್ನು ಮುಗಿಸಿ ಬಂದ ನಂತರ ಅವರನ್ನು ಅಲ್ಲಿನ ಮುಖ್ಯಸ್ತರ ಬಳಿಗೆ ಕರೆದೊಯ್ಯಲಾಯಿತು, ಅವರ ಹೆಸರು ಮಾತ್ರ ಫಲಕದಲ್ಲಿ ಬರೆಯಲಾಗಿತ್ತು. ಮಿಕ್ಕವರಿಗೆಲ್ಲಾ NL ನಂಬರ್ ಐಡಿ ಮಾತ್ರ ಭುಜದ ಮೇಲೆ ಲೇಬಲ್ ಮಾದರಿ ಹೊಳೆಯುತ್ತಿರುತ್ತಿತ್ತು.

ಶ್ರೀ ಜೈ ದೇಸಾಯಿ ಎಂಬ ನೀಲಿ ಸೂಟ್ ಧರಿಸಿದ್ದ 60 ವರ್ಷವಿದ್ದಿರಬಹುದಾದ ಮುಖ್ಯಸ್ತರು ಇವರನ್ನು ಬರಮಾಡಿಕೊಂಡು ಕೈ ಕುಲುಕಿ ಹೇಳಿದರು

"ನನಗನಿಸುವಂತೆ ನಿಮಗೆ ಕನ್ನಡ ಬರುತ್ತಂತೆ... ನನಗೂ ಬರುತ್ತೆ... ಆದರೆ ಬಹುಶಃ ನಿಮ್ಮಷ್ಟು ಸರಿಯಾಗಿ ಮಾತನಾಡಲಾರೆ... ಸ್ವಲ್ಪ ಗಲಿಬಿಲಿಯಾಗುತ್ತದೆ.. ನಿಮ್ಮಿಬ್ಬರಿಗೂ ಸ್ವಾಗತ" ಸ್ವಲ್ಪ ವಿದೇಶಿ ಆಕ್ಸೆಂಟ್ ಮಿಶ್ರಿತ ಸ್ವಷ್ಟ ಕನ್ನಡ ನುಡಿಯಲ್ಲಿತ್ತು.

ಉಜ್ವಲ್ "ನಾನು ಕನ್ನಡಿಗ ಸಾರ್... ನಿಮ್ಮ ಮಾತು ಕೇಳಿ ಬಹಳ ಸಂತೋಷವಾಯಿತು...ನಮ್ಮ ಕನ್ನಡ ಇನ್ನೂ ಬದುಕಿದೆಯಲ್ಲ!"

“ಎಲ್ಲಾ ಭಾಷೆಗಳೂ ಇಲ್ಲಿ ಚಾಲ್ತಿಯಲ್ಲಿದೆ, ಮಿತ್ರ... ಅನಂತಂ ಬ್ರಹ್ಮಾ ಎಂದು ನಾವು ಹೇಳುವುದು ಇದಕ್ಕೇನೇ!”

“ನನಗೆ ಸ್ವಲ್ಪ ಸ್ವಲ್ಪ ಬರುತ್ತದೆ ” ಎಂದಳು ಮರಾಠಿ ಮೂಲದ ಶೀತಲ್.

“ಇರಲಿ, ಸದ್ಯಕ್ಕೆ ಇಂಗ್ಲೀಷಿಗೇ ಬರುವಾ ನಿಮ್ಮಿಬ್ಬರಿಗೂ ಅರ್ಥವಾಗಲೆಂದು”. ಜೈ ದೇಸಾಯರು ಇಬ್ಬರನ್ನೂ ಕೂರಲು ಹೇಳಿ ಕಾಫಿ ತರೆಸಿದರು. ರೋಬೋಟ್ ಸರ್ವರ್ ಕಾಫಿ ಮತ್ತು ಪ್ರೋಟೀನ್ ಕುಕೀಸ್ ಇವರ ಮುಂದೆ ಇಟ್ಟುಹೋಯಿತು

“ನಿಮಗೆ ಮುಂದೆ ಪೂರ್ಣ ಪ್ರಮಾಣದ ಮೆಡಿಕಲ್ ಚೆಕಪ್ ಮಾಡಿಸಿ , ಇಲ್ಲಿನ ಆಹಾರದ ಡಯೆಟ್, ಎಲ್ಲಿ ಹೇಗೆ ಎಂಬುದನ್ನೆಲ್ಲಾ ವಿವರಿಸಲಾಗುವುದು, ನಿಮಗೊಂದು ತಾತ್ಕಾಲಿಕ ನಿವಾಸವನ್ನು ಕೊಡಲಾಗುವುದು, ಆನಂತರ ನೀವು ಸಂಪಾದನೆಗಿಳಿದು ಗಳಿಸಿದ ನಂತರ ನಿಮಗೆ ತಕ್ಕ ನಿವಾಸವನ್ನು ಆರಿಸಿಕೊಳ್ಳಬಹುದು.. ಈಗ ಸದ್ಯಕ್ಕೆ ನಾನು ನಿಮ್ಮ ಹಳೇ ಕತೆಯನ್ನು ಕೇಳಲು ಉತ್ಸುಕನಾಗಿದ್ದೇನೆ. ಇದನ್ನು ನಾನು ವಿಡಿಯೋ ಲೈವ್ ಪ್ರಸಾರ ಮಾಡುತ್ತೇನೆ.. ಆಸಕ್ತಿಯಿದ್ದವರು ನಮ್ಮ ಸರಕಾರಿ ಚಾನೆಲ್ಲಿನಲ್ಲಿ ಇದನ್ನು ವೀಕ್ಷಿಸಿ ನಿಮ್ಮ ಮಾಹಿತಿಯನ್ನು ಅರಿಯುತ್ತಾರೆ, ನಮ್ಮ ವಿಜ್ಞಾನಿಗಳೂ, ಅಧ್ಯಕ್ಷರೂ, ಹಿರಿಯ ಅಧಿಕಾರಿಗಳು ಇಂದು ವಿಶೇಷವಾಗಿ ಇದನ್ನು ಕೇಳಿಸಿಕೊಳ್ಳುತ್ತಾರೆ, ನಿಮ್ಮಂತಾ 500 ವರ್ಷದ ಹಿಂದಿನ ಕಾಲದವರು ಇಲ್ಲಿಗೆ ಬರುವುದು ಸರ್ವೇಸಾಮಾನ್ಯ ವಿಷಯವಂತೂ ಅಲ್ಲ....ನೀವು ಕಾಫಿ ಕುಡಿದ ನಂತರ ಆರಂಭಿಸುತ್ತೇನೆ...”

ಉಜ್ವಲ್ ಮೊದಲು ತನ್ನ ವರದಿಯನ್ನು ಆರಂಭಿಸಿದನು. ಆಗಿನ ಕಾಲದ ಭಾರತದ ತಂತ್ರಜ್ಞಾನ ಮತ್ತು ಸಾಧನೆಗಳನ್ನು ಒತ್ತು ಕೊಟ್ಟು ಸವಿವರವಾಗಿ ತಿಳಿಸಿಕೊಟ್ಟನು. ಆಗಿನ ಮೈಕ್ರೋಬಯೋಲಜಿ ರಿಸರ್ಚ್, ಮತ್ತು ಗಗನಯಾನ, ಶುಕ್ರಯಾನ, ಅಂತರ-

ಬಾಹ್ಯಾಕಾಶ ನಿಲ್ದಾಣವನ್ನು ಭಾರತ ಸ್ಥಾಪಿಸಿದ್ದು ಎಲ್ಲವನ್ನೂ ನಿಯೋಲ್ಯಾಂಡಿನವರು ಓದಿ ಮಾಹಿತಿ ಪಡೆದಿದ್ದರೇ ವಿನಾ ನೈಜ ವರದಿ ಕೇಳಿಸಿಕೊಂಡಿರಲಿಲ್ಲ.

"ಅವುಗಳಲ್ಲಿ ಹಲವು ಮಾಹಿತಿ ನಮಗೆ ಲಭ್ಯವಾಗಲಿಲ್ಲ. ಅಣುಯುದ್ಧ ನಂತರ ಅಂತರ್ಜಾಲ ವ್ಯವಸ್ಥೆಯ ಹಲವು ದಾಖಲೆಗಳ ಸಂಗ್ರಹಗಳು ಶಾಶ್ವತವಾಗಿ ನಷ್ಟವಾಗಿ ಹೋದವು..." ಜೈ ದೇಸಾಯರು ವಿಷಾದಿಸಿದರು.

"ನಾವು ನಮಗೆ ತಿಳಿದ ಮಾಹಿತಿಯನ್ನೆಲ್ಲಾ ನಮ್ಮ ಬಳಿಯಿರುವ ಟ್ಯಾಬ್ಲೆಟ್ ಮೂಲಕ ಕಲೆಹಾಕಿ ಹೊಸದಾಗಿ ಬರೆದು ಮರು ಮಾಹಿತಿ ಸೃಷ್ಟಿ ಮಾಡುತ್ತೇವೆ " ಎಂದು ಉಜ್ವಲ್ ಶೀತಲ್ ಸೇರಿ ಒಪ್ಪಿಕೊಂಡರು.

ಇದನ್ನು ಕೇಳಿಸಿಕೊಂಡು ವಿಡಿಯೋ ಲೈವ್ ಕಾಲ್ ಮೂಲಕ ಸಂಪರ್ಕಕ್ಕೆ ಬಂದ ನಿಯೋಲ್ಯಾಂಡಿನ ರಾಷ್ಟ್ರಾಧ್ಯಕ್ಷ ಜೇ ಆರ್ ಕಾರ್ಲ್ಸನ್ "ಓಹ್, ದಟ್ಸ್ ವಂಡರ್ಫುಲ್...ನೀವು ಮುಂದೇನು ಮಾಡಬೇಕೆಂದಿದ್ದೀರಿ, ಜೈ ದೇಸಾಯರಿಗೆ ಹೇಳಿ... ನಿಮಗೆ ಅನುಮತಿ ಕೊಡಿಸುತ್ತೇವೆ" ಎಂದು ಭರವಸೆ ಕೊಟ್ಟರು.

"ನಾವು ನಮ್ಮ ಬಯೋಟೆಕ್ ಸಂಶೋಧನೆಯನ್ನೇ ಮುಂದುವರೆಸಬೇಕೆಂದಿದ್ದೇವೆ...ನಿಮಗೆ ಅಭ್ಯಂತರವಿಲ್ಲದಿದ್ದರೆ!" ಶೀತಲ್ ಇಬ್ಬರ ಪರವಾಗಿ ಹೇಳಿದಳು.

"ಖಂಡಿತಾ ಮಾಡಿ. ಅದರಲ್ಲಿಯೂ ನಮಗೆ ನೀವು ಒಳಪಟ್ಟ ಪ್ರಯೋಗ- ಕ್ರಯೋಜೆನಿಕ್ ಸ್ಲೀಪ್ ಬಗ್ಗೆ ಇನ್ನೂ ಮಾಹಿತಿ ದೊರೆತೇ ಇಲ್ಲ. ನಮಗೆ ಇನ್ನೂ ಅದು ಲಭ್ಯವಾಗಿಲ್ಲ... ಮಾಡಬಲ್ಲಿರಾ?"

ಉಜ್ವಲ್ ಮತ್ತು ಶೀತಲ್ ಒಬ್ಬರ ಮುಖ ಇನ್ನೊಬ್ಬರು ನೋಡಿಕೊಂಡು ಅರೆಕ್ಷಣದ ನಂತರ ಪೆಚ್ಚಾಗಿ ನಕ್ಕರು.

“ಎಲ್ಲಾ ವಿಧಿಯಾಟ...” ಉಜ್ವಲ್ ವಿವರಿಸಿದ.” ನಾವು ಅದನ್ನೀಗ ಮರೆಯೋಣ ಎಂದು ಶತಪ್ರಯತ್ನ ಮಾಡುತ್ತಿದ್ದೆವು...ಇರಲಿ, ನಮಗೆ ಅದರ ಸಕಲ ಹಂತಗಳೂ ನೆನೆಪಿವೆ, ಅದರ ಮಾನ್ಯುಯಲ್ ಸಹಾ ನಮ್ಮ ಬಳಿಯಿದೆ. ನಿಮಗಿರುವ ಈ ತಂತ್ರಜ್ಞಾನದ ಮಟ್ಟಕ್ಕೆ ಅದೇನೂ ದೊಡ್ಡ ಸವಾಲಾಗದು...”

“ನಾನೂ ಸಿದ್ಧ. ನಿಮ್ಮ ಬಯೋಟೆಕ್ ಲ್ಯಾಬನ್ನು ಒಮ್ಮೆ ಪರೀಕ್ಷಿಸಿ ಕಾರ್ಯೋನ್ಮುಖರಾಗುತ್ತೇವೆ.. ನಮಗೆ ಬೇಕಿರುವ ಸಲಕರಣೆ, ವ್ಯವಸ್ಥೆ?” ಎಂದು ರಾಗ ಎಳೆದಳು ಶೀತಲ್.

“ಎಲ್ಲಾ ನಾವು ಕೊಡುತ್ತೇವೆ” ಆಶ್ವಾಸನೆ ನೀಡಿದರು ಜೈ ದೇಸಾಯರು. “ಜತೆಗೆ ನಿಮ್ಮ ಪ್ರಯೋಗಕ್ಕೆ ಯಾವುದೇ ಮಧ್ಯಪ್ರವೇಶ ಇರುವುದಿಲ್ಲ. ನೀವು ಒತ್ತಡವಿಲ್ಲದೇ ಸಮಯ ತೆಗೆದುಕೊಂಡು ಮಾಡಬಹುದು”

“ಸರ್, ಒಂದು ವಿಷಯ... ನಮ್ಮನ್ನು ಹೀಗೆ ಬಿಟ್ಟು ಟೈಟ್ಯಾನ್ ಯಾತ್ರೆಗೆ ಹೊರಟ ನಮ್ಮ ಹಿರಿಯರು ಮತ್ತೆ ಸಂಪರ್ಕಿಸಿದರೆ, ಅವರಿಗೇನಾಯಿತು?” ಉಜ್ವಲ್ ಮನದಲ್ಲಿ ಇದು ಕಾಡುತ್ತಿದ್ದ ಪ್ರಶ್ನೆ.

“ಏನೂ ತಿಳಿಯಲಿಲ್ಲ, ಬಹುಶಃ ಅವರು ಯಾರಿಗೂ ಸಿಗದಷ್ಟು ದೂರ ಹೋಗಿಬಿಟ್ಟರೇನೋ?...ಯಾವುದೇ ಮಾಹಿತಿಯಿಲ್ಲ” ಜೈ ದೇಸಾಯರ ನಿರಾಶಾದಾಯಕ ಉತ್ತರ.

“ಮುಂದೊಮ್ಮೆ ಹೀಗಾಗದಿರಲಿ...” ಎಂದು ಯೋಚಿಸುತ್ತಾ ನುಡಿದ ಉಜ್ವಲ್, “ಅದಕ್ಕಾಗಿ ನಿಮ್ಮಲ್ಲಿನ ಯುವ ಬಯೋಟೇಕ್ ವಿಜ್ಞಾನಿಗಳ ಒಂದು ಟೀಂ ಕಟ್ಟುತ್ತೇವೆ, ಅವರ ಮೂಲಕ ಎಲ್ಲಾ ಮಾಹಿತಿಯೂ ಭವಿಷ್ಯಕ್ಕೂ ಮುಕ್ತವಾಗಿ ದೊರೆಯಲಾರಂಭಿಸುತ್ತದೆ”

“ಆದರೆ ಒಂದು ಕಂಡೀಷನ್” ಎಂದಳು ದೃಢವಾದ ದನಿಯಲ್ಲಿ ಶೀತಲ್. ಎಲ್ಲರೂ ಅವಳತ್ತ ಏನೆಂಬಂತೆ ಆಸಕ್ತಿಯಿಂದ ನೋಡಿದರು.

“…ಈ ಸಲ ನಾನು ಮಾತ್ರ 500 ವರ್ಷದ ನಿದ್ದೆಗೆ ಒಳಪಡುವುದಿಲ್ಲ” ಎಂದಳು ಶೀತಲ್ ನಾಟಕೀಯವಾಗಿ…

“ಯಾಕೆ ಶೀತಲ್?” ಎಂದ ಉಜ್ವಲ್ ಕೀಟಲೆ ಮಾಡುತ್ತಾ.

“ಅಯ್ಯೋ, ಈಗಲೇ 525 ವರ್ಷದ ಮುದುಕಿಯಾದ ನನಗೆ ಮದುವೆಗೆ ವರ ಸಿಕ್ಕುವುದಿಲ್ಲ, ಇನ್ನೂ 500 ವರ್ಷ ಆಗಿಬಿಟ್ಟರೆ?” ಎಂದಳು ಹುಸಿನಗೆ ಬೀರುತ್ತಾ.

“ಆಹಾ!…ಇಲ್ಲಿ 530 ವರ್ಷದ ಮುದುಕನೊಬ್ಬ ನಿನ್ನನ್ನು ವರಿಸಲು ಸಿದ್ಧನಿದ್ದಾನಂತೆ. ಅವನನ್ನು ಕೇಳಿ ಹೇಳುತ್ತೇನೆ” ಎಂದ ಉಜ್ವಲ್ ಅಷ್ಟೇ ಭೋಳೆತನ ನಟಿಸುತ್ತಾ…

ಎಲ್ಲರೂ ಗೊಳ್ಳನೆ ನಕ್ಕರು.

< ಮುಗಿಯಿತು>